

Volume : 9 | Issue : 148 | August : 27 : 2026 : Thursday
ಸಂಪುಟ : 9 | ಸಂಚಿಕೆ : 148 | ಆಗಸ್ಟ್ : 27 : 2026 : ಗುರುವಾರ
www.VIKRAMAVAHINI.com
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ವಿಕ್ರಮ ವಾಹಿನಿ

ಪುಟ 4 | ₹2 || ಕನ್ನಡ ದಿನಪತ್ರಿಕೆ ||
VIKRAMA VAHINI
PRGI NO: KARKAN/2018/78481



‘ಇರುಮುಡಿ’ ವೀಕ್ಷಿಸಿದ ರಶ್ಮಿಕಾ ಮಂದಣ್ಣ ಚಿತ್ರತಂಡವನ್ನು ಶ್ಲಾಘಿಸಿದರು; ತಂದೆ-ಮಗಳ ಬಾಂಧವ್ಯದ ಕಥೆ ಮನಮುಟ್ಟಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಗೇಂದ್ರ ಸದ್ಯಕ್ಕೆ ರಾಜೀನಾಮೆ ಇಲ್ಲ: ಡಿ.ಕೆ. ಶಿವಕುಮಾರ್ | ಪುಟ 2

ಖೇಲೋ ಇಂಡಿಯಾ: ಇಂದು ಮೋದಿ ಸಂವಾದ | ಪುಟ 4

# ಸಂಪುಟಕ್ಕೆ ಸರ್ಜರಿ: ಮಹಿಳೆಯರಿಗೆ ಸ್ಥಾನ

● ವಿಕ್ರಮ ವಾಹಿನಿ | ಬೆಂಗಳೂರು

ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡುವುದು ಕಾಂಗ್ರೆಸ್ ಸರ್ಕಾರದ ಬದ್ಧತೆ ಹಾಗೂ ಸಿದ್ಧಾಂತ. ಮುಂದಿನ 2–3 ದಿನಗಳಲ್ಲಿ ಸಂಪುಟದಲ್ಲಿ ಸಣ್ಣ ಮಟ್ಟದ ಸರ್ಜರಿ ನಡೆಯಲಿದ್ದು, ಮಹಿಳಾ ಸಚಿವರಿಗೆ ಸ್ಥಾನ ದೊರೆಯಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಇಂಡಿಯಾ ಟುಡೇ ರೌಂಡ್ ಟೇಬಲ್ ಕರ್ನಾಟಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಸಕರ ಅಸಮಾಧಾನ ಹಾಗೂ ಬಣ ರಾಜಕೀಯದ ಕುರಿತು ಸ್ಪಷ್ಟನೆ ನೀಡಿದರು. ಕಾಂಗ್ರೆಸ್‌ನಲ್ಲಿ ಯಾವುದೇ ಬಣಗಳಿಲ್ಲ, ಪಕ್ಷವೇ ಒಂದು ಬಣ. ಸಿದ್ದರಾಮಯ್ಯ ಹಾಗೂ ತಾವು ಒಗ್ಗಟ್ಟಾಗಿದ್ದು, ಎಲ್ಲ ಶಾಸಕರೂ ಸಚಿವ ಸ್ಥಾನಕ್ಕೆ ಅರ್ಹರಾದರೂ ಎಲ್ಲರಿಗೂ ಅವಕಾಶ ನೀಡಲು ಸಾಧ್ಯವಿಲ್ಲ ಎಂದರು.



ಅಧಿಕಾರಕ್ಕೆ ಬಂದ ಬಳಿಕ ತಾವು ಇಡೀ ರಾಜ್ಯದ ಮುಖ್ಯಮಂತ್ರಿಯಾಗಿದ್ದು, ಸಮಾಜದ ಎಲ್ಲ ವರ್ಗದ ಜನರನ್ನು ಸಮಾನವಾಗಿ ಕಾಣುವುದು ತಮ್ಮ ಜವಾಬ್ದಾರಿ ಎಂದು ಶಿವಕುಮಾರ್ ಹೇಳಿದರು. ಸರ್ಕಾರದ ಯೋಜನೆಗಳ ಫಲ ಎಲ್ಲ ಸಮುದಾಯಗಳಿಗೂ ತಲುಪಬೇಕು. ನ್ಯಾಯದ ಪೀಠದಲ್ಲಿ ಕುಳಿತು ಅನ್ಯಾಯ ಮಾಡಬಾರದು ಎಂಬುದು ತಮ್ಮ ನಿಲುವು ಎಂದರು. ಕರ್ನಾಟಕ ದೇಶದ ಆರ್ಥಿಕ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡುತ್ತಿದೆ. ಆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರದಿಂದ ತಾರತಮ್ಯವಾಗುತ್ತಿದೆ ಎಂದು ಆರೋಪಿಸಿದ ಅವರು, ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆ ಹಾಗೂ ಅನುದಾನ ಹಂಚಿಕೆಯಿಂದ ರಾಜ್ಯಗಳಿಗೆ ಅನ್ಯಾಯವಾಗುವ ಆತಂಕವಿದೆ. ಹಾಲಿ ಕ್ಷೇತ್ರಗಳ ಸಂಖ್ಯೆಯನ್ನು ಉಳಿಸಿಕೊಂಡೇ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಬೆಂಗಳೂರು ಅಭಿವೃದ್ಧಿಗೂ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ. ನಗರದ ಸಂಚಾರ ದಟ್ಟಣೆ ನಿವಾರಣೆಗೆ 47 ಕಿ.ಮೀ. ಸುರಂಗ ರಸ್ತೆ ಹಾಗೂ 115 ಕಿ.ಮೀ. ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಬೆಂಗಳೂರು ಅಭಿವೃದ್ಧಿಯ ಜತೆಗೆ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೂ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು. ಮೇಕೆದಾಟು ಯೋಜನೆ ಮೂಲಕ ಬೆಂಗಳೂರಿಗೆ ಕುಡಿಯುವ ನೀರು ಪೂರೈಸಲಾಗುವುದು; ತಮಿಳುನಾಡಿನ ಪಾಲಿನ 177 ಟಿಎಂಸಿ ನೀರು ಹರಿಸುವ ಬದ್ಧತೆ ರಾಜ್ಯಕ್ಕಿದೆ ಎಂದು ಶಿವಕುಮಾರ್ ಹೇಳಿದರು.

## ಸಿಎಂ ಮಾತಿನ ಪ್ರಮುಖ ಅಂಶಗಳು

- **ಉತ್ತಮ ಆಡಳಿತ:** ಕರ್ನಾಟಕದ ಮೂಲಕ ಭಾರತದ ಪ್ರಗತಿಗೆ ಕೊಡುಗೆ ನೀಡುವುದು ಹಾಗೂ ರಾಜ್ಯವನ್ನು ಇತರ ರಾಜ್ಯಗಳಿಗೆ ಮಾದರಿಯಾಗಿಸುವುದು ತಮ್ಮ ಗುರಿ.
- **ಕೇಂದ್ರದ ತಾರತಮ್ಯ:** ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ. ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣದ ಧ್ವನಿ ಕುಗ್ಗುವ ಆತಂಕವಿದೆ.
- **ಮಹಿಳಾ ಮೀಸಲಾತಿ:** ಹಾಲಿ ಕ್ಷೇತ್ರಗಳ ಸಂಖ್ಯೆಯನ್ನು ಉಳಿಸಿಕೊಂಡೇ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು.
- **ಬೆಂಗಳೂರು ಅಭಿವೃದ್ಧಿ:** 47 ಕಿ.ಮೀ. ಸುರಂಗ ರಸ್ತೆ ಹಾಗೂ 115 ಕಿ.ಮೀ. ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಕ್ರಮ; ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ.
- **ವೈಟ್‌ಟಾಪಿಂಗ್:** ಬೆಂಗಳೂರಿನ ಶೇ.60ರಷ್ಟು ರಸ್ತೆಗಳಿಗೆ ವೈಟ್‌ಟಾಪಿಂಗ್ ಮಾಡಲಾಗಿದೆ. ವೃಕ್ಷೋದ್ಯಾನ: ಲಾಲ್‌ಬಾಗ್ ಮಾದರಿಯ 5 ವೃಕ್ಷೋದ್ಯಾನ ನಿರ್ಮಾಣಕ್ಕೆ ಯೋಜನೆ; 18 ತಿಂಗಳಲ್ಲಿ ಜಾರಿಗೊಳಿಸುವ ಭರವಸೆ.
- **ಮೇಕೆದಾಟು:** ಯೋಜನೆಯ ಶೇ.95ರಷ್ಟು ನೀರು ತಮಿಳುನಾಡಿಗೆ ಹರಿಯಲಿದ್ದು, ಬೆಂಗಳೂರಿನ ಕುಡಿಯುವ ನೀರಿಗಷ್ಟೇ ಬಳಕೆ ಎಂದು ಸ್ಪಷ್ಟನೆ.
- **ಭದ್ರಾ ಮೇಲ್ದಂಡೆ:** ಕೇಂದ್ರ ಘೋಷಿಸಿದ್ದ 5,400 ಕೋಟಿ ಅನುದಾನ ಇದುವರೆಗೆ ಬಿಡುಗಡೆಯಾಗಿಲ್ಲ ಎಂದು ಆರೋಪ.
- **ನಾಗೇಂದ್ರ ಪ್ರಕರಣ:** ಇಲಾಖೆಯ ಆಂತರಿಕ ತನಿಖೆಯಲ್ಲಿ ನಾಗೇಂದ್ರ ಅವರ ಕೈವಾಡ ಇಲ್ಲ ಎಂಬ ವರದಿ ಹಿನ್ನೆಲೆಯಲ್ಲಿ ಅವರನ್ನು ಸಂಪುಟಕ್ಕೆ ಸೇರಿಸಲಾಗಿದೆ ಎಂದು ಸಮರ್ಥನೆ.
- **ಯುವ ಸಂಘಟನೆ:** ರಾಜ್ಯಾದ್ಯಂತ 10 ಸಾವಿರ ಯುವ ಸಂಘಗಳನ್ನು ರಚಿಸಿ ಯುವಕರನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸುವ ಗುರಿ.
- **ಅಲ್ಪಸಂಖ್ಯಾತರು:** ಎಲ್ಲ ಸಮುದಾಯಗಳನ್ನೂ ಸಮಾನವಾಗಿ ಕಾಣುವುದು ಸರ್ಕಾರದ ಕರ್ತವ್ಯ; ಅಲ್ಪಸಂಖ್ಯಾತರ ರಕ್ಷಣೆ ಅಗತ್ಯ.
- **ಚುನಾವಣೆ ಗುರಿ:** 2028ರಲ್ಲಿ ಈಗಿರುವುದಕ್ಕಿಂತ ಹೆಚ್ಚಿನ ಸ್ಥಾನ ಗೆದ್ದು ಮತ್ತೆ ಅಧಿಕಾರಕ್ಕೆ ಬರುವ ವಿಶ್ವಾಸ. 2029ರಲ್ಲಿ ಕರ್ನಾಟಕದಿಂದ 20ಕ್ಕೂ ಹೆಚ್ಚು ಲೋಕಸಭಾ ಸ್ಥಾನ ಗೆಲ್ಲುವ ಗುರಿ.
- **‘ಮುಂದೆ ಇನ್ನಷ್ಟು ಅಚ್ಚರಿ’:** ಎಂಎಲ್‌ಸಿ ಚುನಾವಣೆಯ ಬೆಳವಣಿಗೆ ಕುರಿತು ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಇನ್ನಷ್ಟು ಅಚ್ಚರಿ ಹಾಗೂ ಬದಲಾವಣೆಗಳು ನಡೆಯಲಿವೆ ಎಂದು ಸುಳಿವು ನೀಡಿದರು.

■ ಸುದ್ದಿ ಚುಟುಕು

## ರಾಹುಲ್ ಹೇಳಿಕೆ: ‘ಜೂತ್ ಕಿ ಗೂಂಜ್’ ತಿರುಗೇಟು

● ವಿಕ್ರಮ ವಾಹಿನಿ | ನವದೆಹಲಿ

ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ‘ಛಾತ್ರೋಂ ಕಿ ಗೂಂಜ್’ ಕಾರ್ಯಕ್ರಮಗಳಲ್ಲಿ ಮಾಡಿರುವ ಹೇಳಿಕೆಗಳ ಕುರಿತು ‘ಜೂತ್ ಕಿ ಗೂಂಜ್’ ಎಂಬ ವೆಬ್‌ಸೈಟ್ ಪರಿಶೀಲನಾ ವರದಿ ಬಿಡುಗಡೆ ಮಾಡಿದೆ. ಕಾರ್ಯಕ್ರಮಗಳಲ್ಲಿ ರಾಹುಲ್ ಗಾಂಧಿ ಮಾಡಿರುವ 40 ಹೇಳಿಕೆಗಳನ್ನು ಪರಿಶೀಲಿಸಲಾಗಿದ್ದು, 29 ಹೇಳಿಕೆಗಳು ಸುಳ್ಳು ಹಾಗೂ 11 ಹೇಳಿಕೆಗಳು ದಾರಿ ತಪ್ಪಿಸುವಂತಿವೆ ಎಂದು ವೆಬ್‌ಸೈಟ್ ಹೇಳಿಕೊಂಡಿದೆ.

ಜೂತ್ ಕಿ ಗೂಂಜ್ ಪ್ರಕಾರ, ಈ ಹೇಳಿಕೆಗಳನ್ನು ಪರಿಶೀಲಿಸಲು 134 ವಿವಿಧ ಮೂಲಗಳ ಮಾಹಿತಿಯನ್ನು ಬಳಸಲಾಗಿದೆ. ‘ಛಾತ್ರೋಂ ಕಿ ಗೂಂಜ್’ ಕಾರ್ಯಕ್ರಮವು ಜೂನ್ 17ರಂದು ಆರಂಭಗೊಂಡಿದ್ದು, ಬಳಿಕ ಡೆಹ್ರಾಡೂನ್, ಪ್ರಯಾಗರಾಜ್ ಸೇರಿದಂತೆ ವಿವಿಧ ನಗರಗಳಲ್ಲಿ ಕಾರ್ಯಕ್ರಮಗಳು ನಡೆದಿವೆ.

**40 ಹೇಳಿಕೆಗಳ ಪರಿಶೀಲನೆ**

ವೆಬ್‌ಸೈಟ್ ತನ್ನ ಮುಖಪುಟದಲ್ಲಿ ನಾಲ್ಕು ರ್‍ಯಾಲಿಗಳು, 40 ಹೇಳಿಕೆಗಳು ಮತ್ತು ಒಂದು ‘ಉತ್ತರ ಪತ್ರಿಕೆ’ ಎಂಬ ವಿವರ ನೀಡಿದೆ. ರಾಹುಲ್ ಗಾಂಧಿ ಕಾರ್ಯಕ್ರಮಗಳಲ್ಲಿ ಮಾಡಿದ ಹೇಳಿಕೆಗಳನ್ನು ದಾಖಲೆಗಳು ಹಾಗೂ ವಿವಿಧ ಮೂಲಗಳ ಆಧಾರದ ಮೇಲೆ ಪರಿಶೀಲಿಸಲಾಗಿದೆ ಎಂದು ಅದು ತಿಳಿಸಿದೆ.

ಜನರಲ್ ಝಡ್ ಯುವಕರ ಪ್ರಯತ್ನ ‘ಜೂತ್ ಕಿ ಗೂಂಜ್’ ವೆಬ್‌ಸೈಟ್ ಅನ್ನು ಜನರಲ್ ಝಡ್ ಪೀಳಿಗೆಯ ಯುವಕರು ಆರಂಭಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ. ರಾಜಕೀಯ ನಾಯಕರ ಸಾರ್ವಜನಿಕ ಹೇಳಿಕೆಗಳನ್ನು ಪರಿಶೀಲಿಸಿ, ಅವುಗಳ ಸತ್ಯಾಸತ್ಯತೆ ಕುರಿತು ಜನರಿಗೆ ಮಾಹಿತಿ ನೀಡುವುದು ತಮ್ಮ ಉದ್ದೇಶ ಎಂದು ವೇದಿಕೆ ಹೇಳಿಕೊಂಡಿದೆ.

ಆದರೆ, ವೆಬ್‌ಸೈಟ್ ಮಾಡಿರುವ ಈ ವರ್ಗೀಕರಣಗಳು ಅದರದೇ ಪರಿಶೀಲನಾ ಮಾನದಂಡಗಳ ಆಧಾರಿತವಾಗಿದ್ದು, ಸಂಬಂಧಿಸಿದ ಹೇಳಿಕೆಗಳ ಕುರಿತು ರಾಹುಲ್ ಗಾಂಧಿ ಅಥವಾ ಕಾಂಗ್ರೆಸ್‌ನ ಪ್ರತಿಕ್ರಿಯೆಯನ್ನು ವರದಿಯಲ್ಲಿ ಪ್ರತ್ಯೇಕವಾಗಿ ಉಲ್ಲೇಖಿಸಲಾಗಿಲ್ಲ.

## ‘ನಿನ್ನ ತಲೆ ಕಡಿತೀವಿ’: ಪುನೀತ್ ಕೆರೆಹಳ್ಳಿ ವಿರುದ್ಧ ಘೋಷಣೆ

● ವಿಕ್ರಮ ವಾಹಿನಿ | ಬೆಂಗಳೂರು

ಈದ್ ಮಿಲಾದ್ ಮೆರವಣಿಗೆ ವೇಳೆ ಹಿಂದೂ ಕಾರ್ಯಕರ್ತ ಪುನೀತ್ ಕೆರೆಹಳ್ಳಿ ವಿರುದ್ಧ ಆಕ್ಷೇಪಾರ್ಹ ಘೋಷಣೆ ಕೂಗಿದ ಹಾಗೂ ಅವರ ಕಚೇರಿ ಬಳಿ ಗಲಾಟೆ ನಡೆಸಿದ ಆರೋಪ ಕೇಳಿಬಂದಿದೆ. ಇದೇ ವೇಳೆ ಮುರುಳಿ ಎಂಬ ಹಿಂದೂ ಕಾರ್ಯಕರ್ತನ ಮೇಲೆ ಕೆಲವರು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.



ಬಸವನಗುಡಿ ಬಳಿ ನಡೆದ ಮೆರವಣಿಗೆಯ ಸಂದರ್ಭದಲ್ಲಿ ನೂರಕ್ಕೂ ಹೆಚ್ಚು ಮಂದಿ ಪುನೀತ್ ಕೆರೆಹಳ್ಳಿ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ ಎನ್ನಲಾಗಿದೆ. ಈ ವೇಳೆ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಪೊಲೀಸರು ಮಧ್ಯಪ್ರವೇಶಿಸಿದ್ದಾರೆ.

ಘಟನೆಯ ಬಳಿಕ ಪುನೀತ್ ಕೆರೆಹಳ್ಳಿ, ತೇಜಸ್ ಗೌಡ ಹಾಗೂ ನಿತಿನ್ ಅರಸು ಅವರನ್ನು ಬಸವನಗುಡಿ ಪೊಲೀಸ್ ಇನ್‌ಸ್ಪೆಕ್ಟರ್ ಅವರೊಂದಿಗೆ ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗುತ್ತಿತ್ತು. ಈ ವೇಳೆ ಕೆಲವರು ಪೊಲೀಸ್ ವಾಹನವನ್ನು ಹಿಂಬಾಲಿಸಿ ಘೋಷಣೆಗಳನ್ನು ಕೂಗಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಪರಿಶೀಲನೆ ನಡೆಸುತ್ತಿದ್ದು, ಮೆರವಣಿಗೆಯ ವೇಳೆ ನಡೆದ ಗಲಾಟೆ, ಹಲ್ಲೆ ಹಾಗೂ ಘೋಷಣೆಗಳ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ಯಾವುದೇ ಕೃತ್ಯಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಘಟನೆಯ ಹಿನ್ನೆಲೆಯಲ್ಲಿ ಬಸವನಗುಡಿ ಸುತ್ತಮುತ್ತ ಪೊಲೀಸರು ಭದ್ರತೆ ಹೆಚ್ಚಿಸಿದ್ದಾರೆ.

ಮೆರವಣಿಗೆಯ ದೃಶ್ಯಗಳು ಹಾಗೂ ಲಭ್ಯವಿರುವ ಸಾಕ್ಷ್ಯಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ.

## ಲಾಲ್‌ಬಾಗ್-ಕಬ್ಬನ್ ಪಾರ್ಕ್‌ಗೆ ಕಾಯ್ದೆ ಕಂಟಕ?

● ವಿಕ್ರಮ ವಾಹಿನಿ | ಬೆಂಗಳೂರು

ಸರ್ಕಾರಿ ಉದ್ಯಾನಗಳು ಮತ್ತು ಪಾರ್ಕ್‌ಗಳ ಜಾಗದ ಶೇ.5ರಷ್ಟು ಪ್ರದೇಶವನ್ನು ಸಾರ್ವಜನಿಕ ಮೂಲಸೌಕರ್ಯ ಹಾಗೂ ಇತರ ಉಪಯುಕ್ತತಾ ಯೋಜನೆಗಳಿಗೆ ಬಳಸಲು ಅವಕಾಶ ನೀಡುವ ಕರ್ನಾಟಕ ಪಾರ್ಕ್‌ಗಳ (ಸಂರಕ್ಷಣೆ) ತಿದ್ದುಪಡಿ ಮಸೂದೆ, 2026ಕ್ಕೆ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಮಸೂದೆಯನ್ನು ಮರುಪರಿಶೀಲನೆಗಾಗಿ ವಿಧಾನಮಂಡಲಕ್ಕೆ ವಾಪಸ್ ಕಳುಹಿಸುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದ್ದಾರೆ.

ಬುಧವಾರ ನಾಗರಿಕರು, ವಾಕರ್ಸ್ ಅಸೋಸಿಯೇಷನ್‌ಗಳ ಪ್ರತಿನಿಧಿಗಳು ಹಾಗೂ ಮಾಜಿ ಸರ್ಕಾರಿ ಅಧಿಕಾರಿಗಳ ನಿಯೋಗದೊಂದಿಗೆ ರಾಜ್ಯಪಾಲರನ್ನು ಭೇಟಿಯಾದ ಅವರು, ಪ್ರತಿಪಕ್ಷಗಳ ಪ್ರತಿಭಟನೆಯ ನಡುವೆಯೇ ಆಗಸ್ಟ್ 24ರಂದು ಮಸೂದೆಗೆ ವಿಧಾನಸಭೆ ಹಾಗೂ ವಿಧಾನಪರಿಷತ್ ಅನುಮೋದನೆ ನೀಡಲಾಗಿದೆ ಎಂದು ಆರೋಪಿಸಿದರು.

**ಶೇ.5ರಷ್ಟು ಜಾಗ ಬಳಕೆಗೆ ಅವಕಾಶ:** ತಿದ್ದುಪಡಿ ಮಸೂದೆ ಜಾರಿಯಾದರೆ ಸರ್ಕಾರಿ ಪಾರ್ಕ್‌ಗಳು ಹಾಗೂ ಉದ್ಯಾನಗಳ ಒಟ್ಟು ಭೂಮಿ ಅಥವಾ ಕಟ್ಟಡ ಪ್ರದೇಶದ ಗರಿಷ್ಠ ಶೇ.5ರಷ್ಟು ಜಾಗವನ್ನು ಮಾರಾಟ, ಗುತ್ತಿಗೆ, ಉಡುಗೊರೆ, ವಿನಿಮಯ, ಅಡಮಾನ ಸೇರಿದಂತೆ ವಿವಿಧ ರೀತಿಯಲ್ಲಿ ಪರಭಾರೆ ಮಾಡಲು ಅವಕಾಶ ಸಿಗಲಿದೆ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ. ಸಾರ್ವಜನಿಕ ಉಪಯುಕ್ತತಾ ಯೋಜನೆಗಳ ಹೆಸರಿನಲ್ಲಿ ಈ ಅವಕಾಶ ದುರುಪಯೋಗವಾಗುವ ಸಾಧ್ಯತೆಯಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

**ಲಾಲ್‌ಬಾಗ್, ಕಬ್ಬನ್ ಪಾರ್ಕ್‌ಗೂ ಆತಂಕ:** ಬೆಂಗಳೂರಿನಲ್ಲಿ ಸುಮಾರು 1,353 ಪಾರ್ಕ್‌ಗಳು 1,308 ಎಕರೆ ಪ್ರದೇಶದಲ್ಲಿವೆ. ಶೇ.5ರ ಮಿತಿ ಅನ್ವಯಿಸಿದರೆ ಸುಮಾರು 65.4 ಎಕರೆ ಪಾರ್ಕ್ ಜಾಗ ಬೇರೆ ಉದ್ದೇಶಗಳಿಗೆ ಬಳಕೆಯಾಗುವ ಸಾಧ್ಯತೆಯಿದೆ ಎಂದು ಸಂಸದರು ತಿಳಿಸಿದ್ದಾರೆ.

ಸುಮಾರು 240 ಎಕರೆ ವಿಸ್ತೀರ್ಣದ ಲಾಲ್‌ಬಾಗ್ ಮತ್ತು 197 ಎಕರೆ ಕಬ್ಬನ್ ಪಾರ್ಕ್ ಸೇರಿದಂತೆ ಪ್ರಮುಖ ಹಸಿರು ತಾಣಗಳಿಗೂ ಇದರ ಪರಿಣಾಮ ಬೀರುವ ಆತಂಕವಿದೆ. ಈ ಎರಡು ಉದ್ಯಾನಗಳ ಒಟ್ಟು ಪ್ರದೇಶದ ಶೇ.5ರಷ್ಟು ಅಂದಾಜಿನಲ್ಲಿ ಸುಮಾರು 22 ಎಕರೆ ಜಾಗ ಬೇರೆ ಬಳಕೆಗೆ ಒಳಪಡುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ.

**ಟನಲ್ ರಸ್ತೆ ಯೋಜನೆಗೂ ವಿರೋಧ:** ಬೆಂಗಳೂರಿನ ಸುರಂಗ ರಸ್ತೆ ಯೋಜನೆಗಾಗಿ ಲಾಲ್‌ಬಾಗ್‌ನ ಸುಮಾರು 1.92 ಹೆಕ್ಟೇರ್ ಜಾಗವನ್ನು ಬಳಸುವ ಸಾಧ್ಯತೆಯಿದೆ ಎಂದು ತೇಜಸ್ವಿ ಸೂರ್ಯ ಹೇಳಿದ್ದಾರೆ.

ಹೆಬ್ಬಾಳ ಶಾರ್ಟ್ ಟನಲ್ ಯೋಜನೆಗೂ ಹೆಬ್ಬಾಳ ಕೆರೆಯ ಸುಮಾರು 3.45 ಎಕರೆ ಪ್ರದೇಶ ಬೇಕಾಗಬಹುದು ಎಂದು ಅವರು ತಿಳಿಸಿದ್ದಾರೆ.

**ಪಾರ್ಕ್‌ಗಳು ಕೇವಲ ಖಾಲಿ ಜಾಗವಲ್ಲ;** ಅವು ಶುದ್ಧ ಗಾಳಿ, ಜೀವವೈವಿಧ್ಯ, ಸಾರ್ವಜನಿಕ ಆರೋಗ್ಯ ಹಾಗೂ ಪರಿಸರ ಸಮತೋಲನಕ್ಕೆ ಅಗತ್ಯವಾದ ಹಸಿರು ಪ್ರದೇಶಗಳಾಗಿವೆ. ಹೀಗಾಗಿ ಪಾರ್ಕ್ ಜಾಗವನ್ನು ಬೇರೆ ಉದ್ದೇಶಕ್ಕೆ ಬಳಸುವ ಮೊದಲು ಪರಿಸರ ಮೌಲ್ಯಮಾಪನ, ಸಾರ್ವಜನಿಕ ಸಮಾಲೋಚನೆ ಹಾಗೂ ಪಾರದರ್ಶಕ ಪ್ರಕ್ರಿಯೆ ಕಡ್ಡಾಯವಾಗಬೇಕು ಎಂದು ಅವರು ಒತ್ತಾಯಿಸಿದ್ದಾರೆ.



‘ಸಾರ್ವಜನಿಕ ಉಪಯುಕ್ತತೆ’ ಎಂಬ ಪದಕ್ಕೆ ಸ್ಪಷ್ಟ ವ್ಯಾಖ್ಯಾನ ನೀಡಿಲ್ಲ. ಭವಿಷ್ಯದಲ್ಲಿ ಪಾರ್ಕ್ ಜಾಗ ವಾಣಿಜ್ಯ ಅಥವಾ ಇತರ ಉದ್ದೇಶಗಳಿಗೆ ದುರುಪಯೋಗವಾಗದಂತೆ ಸೂಕ್ತ ರಕ್ಷಣಾ ಕ್ರಮಗಳನ್ನು ರೂಪಿಸಬೇಕು. ಸಂವಿಧಾನದ 200ನೇ ವಿಧಿಯಡಿ ರಾಜ್ಯಪಾಲರು ಮಸೂದೆಯನ್ನು ಮರುಪರಿಶೀಲನೆಗಾಗಿ ವಾಪಸ್ ಕಳುಹಿಸಬೇಕು’ ಎಂದು ತೇಜಸ್ವಿ ಸೂರ್ಯ ಮನವಿ ಮಾಡಿದ್ದಾರೆ.

## ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೂ ರೂ 1 ಲಕ್ಷ ಶುಲ್ಕ!

● ವಿಕ್ರಮ ವಾಹಿನಿ | ಬೆಂಗಳೂರು

ಸಾರ್ವಜನಿಕ ಸಮಸ್ಯೆಗಳ ವಿರುದ್ಧ ಪ್ರತಿಭಟನೆ ನಡೆಸಲು ರಾಜಧಾನಿಯ ಫ್ರೀಡಂ ಪಾರ್ಕ್ ಬಳಸುವ ಸಂಘಟನೆಗಳಿಗೆ ಇದೀಗ ಶುಲ್ಕದ ಹೊರೆ ಎದುರಾಗಿದೆ. ಪ್ರತಿಭಟನೆಗಾಗಿ ದಿನಕ್ಕೆ ರೂ 1 ಲಕ್ಷ ಬಾಡಿಗೆ ಹಾಗೂ ರೂ 10 ಸಾವಿರ ಮುಂಗಡ ಪಾವತಿಸಬೇಕೆಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಿಗದಿ ಮಾಡಿರುವುದು ಹೋರಾಟಗಾರರು ಹಾಗೂ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ನಗರದ ವಿವಿಧೆಡೆ ಪ್ರತಿಭಟನೆಗಳಿಂದ ಸಂಚಾರಕ್ಕೆ ತೊಂದರೆಯಾಗುವುದನ್ನು ತಪ್ಪಿಸಲು ಫ್ರೀಡಂ ಪಾರ್ಕ್ ಅನ್ನು ಪ್ರತಿಭಟನೆಗಳಿಗೆ ನಿಗದಿಪಡಿಸಲಾಗಿತ್ತು. ಬಡ ಹಾಗೂ ವಿವಿಧ ಸಂಘಟನೆಗಳ ಹೋರಾಟಗಾರರಿಗೆ ಅನುಕೂಲವಾಗುವಂತೆ ಇಲ್ಲಿ ಸೌಲಭ್ಯ ಕಲ್ಪಿಸಲಾಗಿತ್ತು. ಇದೀಗ ಕಟ್ಟಡದ ನಿರ್ವಹಣೆಯನ್ನು ತನ್ನ ವ್ಯಾಪ್ತಿಗೆ ಪಡೆದಿರುವ ಜಿಬಿಎ, ಪ್ರತಿಭಟನೆ ನಡೆಸುವವರಿಗೆ ಭಾರಿ ಶುಲ್ಕ ವಿಧಿಸಿದೆ.

ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಲಾದ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಇಷ್ಟೊಂದು ಶುಲ್ಕ ವಿಧಿಸುವುದು ಜನರ ಪ್ರಜಾಸತ್ತಾತ್ಮಕ ಹಕ್ಕಿಗೆ ಅಡ್ಡಿಯಾಗಬಹುದು ಎಂದು ಹೋರಾಟಗಾರರು ಆಕ್ಷೇಪಿಸಿದ್ದಾರೆ. ಫ್ರೀಡಂ ಪಾರ್ಕ್‌ನ ಸುಮಾರು 21 ಎಕರೆ ಪ್ರದೇಶದಲ್ಲಿ 5 ಎಕರೆ ಜಾಗವನ್ನು ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಮೀಸಲಿಡಲಾಗಿದೆ. 2ನೇ ಪುಟಕ್ಕೆ...

# 105 ಭಾರತೀಯರು ಸೇರಿ 400 ಮಂದಿ ನಾಪತ್ತೆ

● ವಿಕ್ರಮ ವಾಹಿನಿ | ಕಠ್ಮಂಡು

ಉತ್ತರ ನೇಪಾಳದ ರಸುವಾ ಜಿಲ್ಲೆಯಲ್ಲಿ ಭೋಟೆಕೋಶಿ ನದಿ ಹಠಾತ್ ಉಕ್ಕಿ ಹರಿದ ಪರಿಣಾಮ ಭೀಕರ ಪ್ರವಾಹ ಸಂಭವಿಸಿದ್ದು, ವ್ಯಾಪಕ ಹಾನಿ ಉಂಟಾಗಿದೆ. ಪ್ರವಾಹದಲ್ಲಿ ಇದುವರೆಗೆ 95 ಮಂದಿ ಮೃತಪಟ್ಟಿದ್ದು, 384 ಮಂದಿ ನಾಪತ್ತೆಯಾಗಿದ್ದಾರೆ ಎಂದು ನೇಪಾಳ ಪ್ರವಾಸೋದ್ಯಮ ಮಂಡಳಿ ತಿಳಿಸಿದೆ. ನಾಪತ್ತೆಯಾದವರಲ್ಲಿ 105 ಮಂದಿ ಭಾರತೀಯರು ಸೇರಿದ್ದಾರೆ.

ಪ್ರವಾಹದ ರಭಸಕ್ಕೆ ನದಿಗಳ ಮೇಲಿನ ಸೇತುವೆಗಳು, ಮನೆಗಳು ಹಾಗೂ ರಸ್ತೆಗಳು ಕೊಚ್ಚಿಹೋಗಿವೆ. ರಸುವಾ, ನುವಾಕೋಟ್ ಮತ್ತು ಧಾಡಿಂಗ್ ಜಿಲ್ಲೆಗಳಲ್ಲಿ ಪ್ರವಾಹದ ತೀವ್ರತೆ ಹೆಚ್ಚಿದ್ದು, ಹಲವು ಪ್ರದೇಶಗಳ ಸಂಪರ್ಕ ಕಡಿತಗೊಂಡಿದೆ. ಸ್ಥಳೀಯವಾಗಿ ಭಾರಿ ಮಳೆಯಾಗದಿದ್ದರೂ ಟಿಬೆಟ್‌ನ ಹಿಮಾಲಯ ಪ್ರದೇಶದಲ್ಲಿ ಹಿಮ ಕರಗುವಿಕೆ ಅಥವಾ ಹಿಮನದಿ ಸರೋವರ ಸ್ಫೋಟದಿಂದ ನೀರಿನ ಮಟ್ಟ ದಿಢೀರ್ ಏರಿರಬಹುದು ಎಂದು ಶಂಕಿಸಲಾಗಿದೆ.

**105 ಭಾರತೀಯರು ನಾಪತ್ತೆ**

ನೇಪಾಳ ಪ್ರವಾಸೋದ್ಯಮ ಮಂಡಳಿಯ ಪ್ರಕಾರ, ಪ್ರವಾಹ ಪೀಡಿತ ಪ್ರದೇಶದಲ್ಲಿ 291 ವಿದೇಶಿಯರು ಹಾಗೂ 93 ನೇಪಾಳಿ ನಾಗರಿಕರು ಸೇರಿದಂತೆ 384 ಮಂದಿ ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ವಿದೇಶಿಯರಲ್ಲಿ 105 ಮಂದಿ ಭಾರತೀಯರಾಗಿದ್ದಾರೆ. ರಸುವಾ ಜಿಲ್ಲೆಯಲ್ಲಿ 26 ನೇಪಾಳ ಪೊಲೀಸ್ ಸಿಬ್ಬಂದಿ ಹಾಗೂ ಸಶಸ್ತ್ರ ಪೊಲೀಸ್ ಪಡೆಯ ಏಳು ಸಿಬ್ಬಂದಿಯೂ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಯುದ್ಧೋಪಾದಿಯಲ್ಲಿ ರಕ್ಷಣಾ ಕಾರ್ಯ**



ನೇಪಾಳ ಪ್ರಧಾನಿ ಬಲೇಂದ್ರ ಶಾ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ತುರ್ತು ಸಭೆ ನಡೆಸಿ ರಕ್ಷಣಾ ಕಾರ್ಯಾಚರಣೆಗೆ ಸೂಚಿಸಿದ್ದಾರೆ. ನೇಪಾಳ ಸೇನೆ ಹೆಲಿಕಾಪ್ಟರ್‌ಗಳು ಹಾಗೂ ವಿಪತ್ತು ಪರಿಹಾರ ತಂಡಗಳನ್ನು ಪೀಡಿತ ಪ್ರದೇಶಗಳಿಗೆ ಕಳುಹಿಸಿದೆ. ನಾಪತ್ತೆಯಾದವರಿಗಾಗಿ ಶೋಧ ಕಾರ್ಯ ಮುಂದುವರಿದಿದ್ದು, ಹಾನಿಯ ಪ್ರಮಾಣದ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ.

**ಜಲವಿದ್ಯುತ್ ಯೋಜನೆಗಳಿಗೆ ಹಾನಿ**

ಪ್ರವಾಹದಿಂದ ನೇಪಾಳದ ಪ್ರಮುಖ ಜಲವಿದ್ಯುತ್ ಹಾಗೂ ವಿದ್ಯುತ್ ಪ್ರಸರಣ ವ್ಯವಸ್ಥೆಗಳಿಗೂ ಹಾನಿಯಾಗಿದೆ. ರಸುವಾಗಧಿ, ಚಿಲಿಮೆ, ತ್ರಿಶೂಲಿ ಸೇರಿದಂತೆ ಹಲವು ಜಲವಿದ್ಯುತ್ ಯೋಜನೆಗಳು ಹಾಗೂ ಸಬ್‌ಸ್ಟೇಷನ್‌ಗಳಿಗೆ ಹಾನಿಯಾಗಿರುವುದಾಗಿ ನೇಪಾಳ ವಿದ್ಯುತ್ ಪ್ರಾಧಿಕಾರ ತಿಳಿಸಿದೆ. ಇದರಿಂದ ಹಲವು ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

**ಬಿಹಾರ, ಉತ್ತರ ಪ್ರದೇಶದಲ್ಲೂ ಕಟ್ಟೆಚ್ಚರ**

ಪ್ರವಾಹದ ನೀರು ಗಂಡಕ್ ನದಿಯ ಮೂಲಕ ಬಿಹಾರದ ಆರು ಜಿಲ್ಲೆಗಳಿಗೆ ಹರಿಯುವ ಆತಂಕ ವ್ಯಕ್ತವಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ತಂಡವನ್ನೂ ಸನ್ನದ್ಧವಾಗಿರಿಸಲಾಗಿದೆ. ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ.

## ನೇಪಾಳ ಪ್ರವಾಹ: ಮೋದಿ ನೆರವಿನ ಭರವಸೆ

● ವಿಕ್ರಮ ವಾಹಿನಿ | ನವದೆಹಲಿ

ಟಿಬೆಟ್ ಗಡಿಯಿಂದ ಭೋಟೆ ಕೋಶಿ ನದಿಗೆ ಏಕಾಏಕಿ ಭಾರಿ ಪ್ರಮಾಣದ ನೀರು ಹರಿದುಬಂದ ಪರಿಣಾಮ ನೇಪಾಳದ ರಸುವಾ ಜಿಲ್ಲೆಯಲ್ಲಿ ಭೀಕರ ಪ್ರವಾಹ ಸಂಭವಿಸಿದೆ. ತಿಮುರೆ ಹಾಗೂ ಸ್ಯಾಫ್ರುಬೆಸಿ ಪ್ರದೇಶಗಳು ತೀವ್ರವಾಗಿ ಹಾನಿಗೊಳಗಾಗಿದ್ದು, ಹಲವು ಮನೆಗಳು, ವಾಹನಗಳು, ಸೇತುವೆಗಳು ಹಾಗೂ ಮೂಲಸೌಕರ್ಯಗಳು ಕೊಚ್ಚಿಹೋಗಿವೆ.



ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೇಪಾಳದ ಪ್ರಧಾನಿ ಬಲೇಂದ್ರ ಶಾ ಅವರಿಗೆ ದೂರವಾಣಿ ಕರೆ ಮಾಡಿ ಪರಿಸ್ಥಿತಿ ಕುರಿತು ಮಾಹಿತಿ ಪಡೆದರು. ಪ್ರವಾಹದಲ್ಲಿ ಸಂಭವಿಸಿದ ಜೀವಹಾನಿಗೆ ಸಂತಾಪ ಸೂಚಿಸಿದ ಮೋದಿ, “ಕಷ್ಟದ ಈ ಸಂದರ್ಭದಲ್ಲಿ ಭಾರತ ನೇಪಾಳದ ಜನತೆಯೊಂದಿಗೆ ನಿಲ್ಲಲಿದೆ. ಅಗತ್ಯವಿರುವ ಎಲ್ಲ ರೀತಿಯ ನೆರವು ನೀಡಲು ಭಾರತ ಸಿದ್ಧವಾಗಿದೆ” ಎಂದು ಭರವಸೆ ನೀಡಿದ್ದಾರೆ. 2ನೇ ಪುಟಕ್ಕೆ...

# ವಿಶಿಷ್ಟ

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481
ವಿಕ್ರಮ ವಾಹಿನಿ
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

### ಸವಿ ವಾಹಿನಿ

ಸ್ನೇಹಕ್ಕೆ ಬಣ್ಣವಿಲ್ಲ ಆದರೂ ಅದು ವರ್ಣಮಯವಾಗಿದೆ
ಸ್ನೇಹಕ್ಕೆ ಮುಖವಿಲ್ಲ, ಆದರೂ ಅದು ಸುಂದರವಾಗಿದೆ
ಸ್ನೇಹಕ್ಕೆ ಮನೆಯಿಲ್ಲ, ಆದರೆ ಅದು ನಮ್ಮ ನಿಮ್ಮ
ಹೃದಯದಲ್ಲಿದೆ.

### ದಿನ ಪಂಚಾಂಗ

ಆಗಸ್ಟ್, 27-2026, ಗುರುವಾರ ವರ್ಷ ಋತು, ಶ್ರಾವಣ ಮಾಸ, ಶುದ್ಧ ಪಕ್ಷ. ಚತುರ್ದಶಿ ತಿಥಿ ಬೆ-8:25 ಧನಿಷ್ಠ ನಕ್ಷತ್ರ ರಾ-2:54
ರಾಹುಕಾಲ ಮ-1:53-3:26
ಶಿವಪವಿತ್ರಾರೋಪಣ, ಹಯಗ್ರೀವ ಜಯಂತಿ, ಸಿರಿಗೆರೆ ಗುರುಶಾಂತರಾಜ ದೇಶಿಕೇಂದ್ರ ನಿಜೈಕ್ಯ ದಿನ, ಟಿ.ಬಿ. ಡ್ಯಾಮ ರಾಷ್ಟ್ರೀಯ ಹೆದ್ದಾರಿ 13 ರ ಪಕ್ಕ ಶನೇಶ್ವರ ದೇವಸ್ಥಾನ ವಾರ್ಷಿಕೋತ್ಸವ

### ಆರೋಗ್ಯ

## ಖಾಲಿ ಹೊಟ್ಟೆಯಲ್ಲಿ ತುಳಸಿ ಸೇವನೆ: ಆರೋಗ್ಯಕ್ಕೆ ಹಲವು ಲಾಭ



ಭಾರತೀಯ ಸಂಪ್ರದಾಯದಲ್ಲಿ ಪವಿತ್ರ ಸ್ಥಾನ ಪಡೆದಿರುವ ತುಳಸಿ ಕೇವಲ ಪೂಜೆಗೆ ಸೀಮಿತವಲ್ಲ. ಆಯುರ್ವೇದದಲ್ಲಿ ಔಷಧೀಯ ಗುಣಗಳಿರುವ ಸಸ್ಯವೆಂದು ಪರಿಗಣಿಸಲಾಗುವ ತುಳಸಿಯನ್ನು ಹಲವು ವರ್ಷಗಳಿಂದ ಮನೆಮದ್ದುಗಳಲ್ಲೂ ಬಳಸಲಾಗುತ್ತಿದೆ. ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕೆಲವು ತುಳಸಿ ಎಲೆಗಳನ್ನು ಸೇವಿಸುವ ಅಭ್ಯಾಸವು ಆರೋಗ್ಯಕರ ಜೀವನಶೈಲಿಯ ಭಾಗವಾಗಬಹುದು ಎಂದು ಹೇಳಲಾಗುತ್ತದೆ. ಆದರೆ ತುಳಸಿಯನ್ನು ಯಾವುದೇ ಕಾಯಿಲೆಗೆ ಖಚಿತ ಚಿಕಿತ್ಸೆಯಾಗಿ ಪರಿಗಣಿಸಬಾರದು.

**ಒತ್ತಡ ಕಡಿಮೆ ಮಾಡಲು ನೆರವು:** ತುಳಸಿಯಲ್ಲಿ ವಿವಿಧ ಸಸ್ಯಸಂಬಂಧಿ ಸಂಯುಕ್ತಗಳು ಮತ್ತು ಉತ್ಕರ್ಷಣ ನಿರೋಧಕ ಗುಣಗಳಿವೆ. ಕೆಲವು ಅಧ್ಯಯನಗಳಲ್ಲಿ ತುಳಸಿ ಸೇವನೆಯು ಒತ್ತಡ ಮತ್ತು ಆತಂಕಕ್ಕೆ ಸಂಬಂಧಿಸಿದ ಕೆಲವು ಲಕ್ಷಣಗಳನ್ನು ಕಡಿಮೆ ಮಾಡಲು ನೆರವಾಗಬಹುದು ಎಂಬ ಸೂಚನೆ ದೊರೆತಿದೆ. ದೇಹದ ಒತ್ತಡ ಪ್ರತಿಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಕಾರ್ಟಿಸೋಲ್ ಸೇರಿದಂತೆ ಕೆಲವು ಜೈವಿಕ ಸೂಚಕಗಳ ಮೇಲೂ ಪರಿಣಾಮ ಬೀರಬಹುದು ಎಂದು ಸಂಶೋಧನೆಗಳು ಸೂಚಿಸುತ್ತವೆ. ಆದಾಗ್ಯೂ, ಈ ಪ್ರಯೋಜನಗಳನ್ನು ಖಚಿತಪಡಿಸಲು ಇನ್ನಷ್ಟು ಮಾನವ ಅಧ್ಯಯನಗಳ ಅಗತ್ಯವಿದೆ.

**ರೋಗನಿರೋಧಕ ಶಕ್ತಿಗೆ ಬೆಂಬಲ:** ತುಳಸಿಯಲ್ಲಿ ಉತ್ಕರ್ಷಣ ನಿರೋಧಕ ಹಾಗೂ ಉರಿಯೂತ ಶಮನಕಾರಿ ಗುಣಗಳನ್ನು ಹೊಂದಿರುವ ಸಸ್ಯಸಂಬಂಧಿ ಅಂಶಗಳಿವೆ. ಇವು ದೇಹವನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸಲು ನೆರವಾಗಬಹುದು. ಹೀಗಾಗಿ ಸಮತೋಲಿತ ಆಹಾರ ಮತ್ತು ಆರೋಗ್ಯಕರ ಜೀವನಶೈಲಿಯೊಂದಿಗೆ ತುಳಸಿಯನ್ನು ಆಹಾರದ ಒಂದು ಭಾಗವಾಗಿ ಬಳಸಬಹುದು.

**ಆಯುರ್ವೇದದಲ್ಲಿ ವಿಶೇಷ ಸ್ಥಾನ:** ಆಯುರ್ವೇದದಲ್ಲಿ ತುಳಸಿಗೆ ಹಲವು ಶತಮಾನಗಳಿಂದ ಮಹತ್ವ ನೀಡಲಾಗಿದೆ. ದೈಹಿಕ ಹಾಗೂ ಮಾನಸಿಕ ಒತ್ತಡವನ್ನು ನಿಭಾಯಿಸಲು ಸಹಾಯ ಮಾಡುವ 'ಅಡಾಪ್ಟೋಜೆನ್' ಮೂಲಿಕೆಗಳ ಪಟ್ಟಿಯಲ್ಲಿ ತುಳಸಿಯನ್ನು ಉಲ್ಲೇಖಿಸಲಾಗುತ್ತದೆ. ಆತಂಕ, ಆಯಾಸ ಮತ್ತು ಒತ್ತಡದಂತಹ ಸಮಸ್ಯೆಗಳಲ್ಲಿ ಇದರ ಬಳಕೆಯನ್ನು ಆಯುರ್ವೇದ ಪದ್ಧತಿಯಲ್ಲಿ ಕಾಣಬಹುದು. ಆದರೆ ಆಯುರ್ವೇದ ಔಷಧಿ ಅಥವಾ ಚಿಕಿತ್ಸೆಯನ್ನು ವೈದ್ಯರ ಸಲಹೆಯೊಂದಿಗೆ ಮಾತ್ರ ಪಡೆಯುವುದು ಸೂಕ್ತ.

**ಬೆಳಿಗ್ಗೆ ಸೇವಿಸುವ ವಿಧಾನ:** ಕೆಲವರು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ 4ರಿಂದ 5 ತಾಜಾ ತುಳಸಿ ಎಲೆಗಳನ್ನು ಚೆನ್ನಾಗಿ ತೊಳೆದು ಸೇವಿಸುತ್ತಾರೆ. ಎಲೆಗಳನ್ನು ನೇರವಾಗಿ ಜಗಿದು ತಿನ್ನಬಹುದು ಅಥವಾ ನೀರಿನೊಂದಿಗೆ ತೆಗೆದುಕೊಳ್ಳಬಹುದು. ಆದರೆ ಖಾಲಿ ಹೊಟ್ಟೆಯಲ್ಲಿ ಸೇವಿಸುವುದರಿಂದಲೇ ಹೆಚ್ಚಿನ ಪ್ರಯೋಜನ ದೊರೆಯುತ್ತದೆ ಎಂಬುದಕ್ಕೆ ಬಲವಾದ ವೈಜ್ಞಾನಿಕ ಪುರಾವೆ ಇಲ್ಲ. ಆದ್ದರಿಂದ ಇದನ್ನು ಆರೋಗ್ಯಕರ ದಿನಚರಿಯ ಒಂದು ಆಯ್ಕೆಯಾಗಿ ಮಾತ್ರ ನೋಡಬೇಕು. ಒಟ್ಟಿನಲ್ಲಿ, ತುಳಸಿ ಆರೋಗ್ಯಕರ ಆಹಾರ ಪದ್ಧತಿಯ ಒಂದು ಭಾಗವಾಗಬಹುದು. ಆದರೆ 'ಪ್ರತಿದಿನ ಐದು ಎಲೆ ಸೇವಿಸಿದರೆ ಎಲ್ಲ ಕಾಯಿಲೆ ಗುಣವಾಗುತ್ತದೆ' ಎಂಬ ರೀತಿಯ ಹೇಳಿಕೆಗಳಿಗೆ ವೈಜ್ಞಾನಿಕ ಆಧಾರವಿಲ್ಲ.

# ಕಾವೇರಿ ಸಮಸ್ಯೆ: ಹೊಲಸು ರಾಜಕೀಯದ ಪರಮಾವಧಿ!




ತನಗೆ ಮಕ್ಕಳಿಲ್ಲವೆಂಬ ಕೊರಗಿನಲ್ಲಿ ಕೊಡಗಿಗೆ ಬಂದ ಕವೇರ ಎಂಬ ಬ್ರಾಹ್ಮಣ ಋಷಿ ಬ್ರಹ್ಮನನ್ನು ಕುರಿತು ತಪಸ್ಸು ಆಚರಿಸುತ್ತಾನೆ. ತಪಸ್ಸು ಉಗ್ರವಾಗುತ್ತಾ ಅಗ್ನಿಯಾಗಿ ಪಲ್ಲಟಗೊಂಡು ಜೀವಜಗತ್ತನ್ನು ಸುಡಲಾರಂಭಿಸುತ್ತದೆ. ಬ್ರಹ್ಮ ಪ್ರತ್ಯಕ್ಷನಾಗಲೇಬೇಕಾಗುತ್ತದೆ. ಬ್ರಹ್ಮನಲ್ಲಿ ಮಗುವಿಗಾಗಿ ಕವೇರ ಪ್ರಾರ್ಥಿಸುತ್ತಾನೆ. ಶಾಪಗ್ರಸ್ತನಾಗಿದ್ದ ಕವೇರನ ಮೇಲೆ ಬ್ರಹ್ಮ ಕಾರುಣ್ಯಭಾವದಿಂದ ತನ್ನ ಮಗಳಾದ ಲೋಪಮುದ್ರಾದೇವಿಯನ್ನೇ ಕೊಡುತ್ತಾನೆ. ಕವೇರನ ಸಾಕುಮಗಳಾದ ಲೋಪಮುದ್ರಾದೇವಿ ಕಾಲಕ್ರಮೇಣ ಕಾವೇರಿಯಮ್ಮ ಆಗುತ್ತಾಳೆ. ಇಹಲೋಕದ ನರರು ಮಾಡುವ ಪಾಪಕೃತ್ಯಗಳನ್ನು ತೊಳೆಯಲು ತಾನು ನದಿಯಾಗುತ್ತೇನೆಂದು ಕವೇರನಿಗೆ ಕಾವೇರಿಯಮ್ಮ ಮಾತು ಕೊಡುತ್ತಾಳೆ. ಕಾಲಗತಿಯಲ್ಲಿ ಮಾತಾಪಿತರನ್ನು ಕಳೆದುಕೊಂಡ ಕಾವೇರಿಯಮ್ಮ ಬ್ರಹ್ಮಾದ್ರಿಯಲ್ಲಿ ನೆಲೆನಿಲ್ಲುತ್ತಾಳೆ. ಶಿವನನ್ನು ಕಾಣಬೇಕೆಂದು ಸಹ್ಯಾದ್ರಿಯನ್ನೇರಿದ ಅಗಸ್ತ್ಯನಿಗೆ ಸುಂದರ ಕುವರಿಯಾದ ಕಾವೇರಿ ಕಾಣಿಸುತ್ತಾಳೆ. ಅವಳಲ್ಲಿ ಅನುರಕ್ತನಾದ ಅಗಸ್ತ್ಯ ಮದುವೆಯಾಗೆಂದು ಅವಳಲ್ಲಿ ಕೇಳಿಕೊಳ್ಳುತ್ತಾನೆ. ಕಾವೇರಿ ಒಪ್ಪುತ್ತಾಳೆ. ಕೊಡವ ಸಂಪ್ರದಾಯದಂತೆ ಲಗ್ನವಾಗುತ್ತದೆ. "ಯಾವ ಸಂದರ್ಭದಲ್ಲೂ ತನ್ನನ್ನು ಬಿಟ್ಟು ಹೋಗಬಾರದು, ಹೋದರೆ ನಾನು ನದಿಯಾಗಿ ಬಿಡುತ್ತೇನೆ" ಎಂದು ಅಗಸ್ತ್ಯನಿಗೆ ಕಾವೇರಿ ಷರತ್ತು ಹಾಕುತ್ತಾಳೆ. ಒಮ್ಮೆ ತನಕೆ ಎಂಬ ನದಿಗೆ ಸ್ನಾನಕ್ಕೆ ಹೋಗುವಾಗ ಅಗಸ್ತ್ಯ ಕಾವೇರಿಯನ್ನು ಬಂಗಾರದ ಗಿಂಡಿಯೊಂದರಲ್ಲಿ ಅಡಗಿಸಿಟ್ಟು ಜೋಪಾನವಾಗಿ ನೋಡಿಕೊಳ್ಳುವಂತೆ ತನ್ನ ಶಿಷ್ಯರಿಗೆ ಕೊಡುತ್ತಾನೆ. ಪತಿ ತನ್ನ ಮಾತನ್ನು ಮೀರಿದನೆಂದು ಕಾವೇರಿ ಕ್ರುದ್ಧಳಾಗುತ್ತಾಳೆ. ಕಸವರದ ಗಿಂಡಿಯನ್ನು ಹೊತ್ತೊಯ್ಯುತ್ತಿದ್ದ ಅಗಸ್ತ್ಯರ ಶಿಷ್ಯ ಕಾವೇರಿಯ ತಪದಿಂದಾಗಿ ಬೀಳುತ್ತಾನೆ. ಗಿಂಡಿ ಕೆಳಗೆ ಬಿದ್ದದ್ದೇ ಕಾವೇರಿ ನದಿಯಾಗಿ ಹರಿದು ಬಿಡುತ್ತಾಳೆ. ಅಗಸ್ತ್ಯನಿಗೆ ವಿಷಯ ತಿಳಿಯುತ್ತದೆ. ಓಡೋಡಿ ಬಂದು ಹರಿಯುವ ಕಾವೇರಿಯ ಮಧ್ಯೆ ಬಂದು ಅವಳನ್ನು ತಡೆಯುತ್ತಾನೆ. ಆಗ ಕಾವೇರಿ ಬಲಮುಖವಾಗಿ ಹರಿಯುತ್ತಾಳೆ. ಬಲಮುರಿ ಕಾವೇರಿಯಾಗುತ್ತಾಳೆ. ಈ ಹಿನ್ನೆಲೆಯಿಂದಾಗಿಯೇ ಇರಬೇಕು, ಕೊಡವ ಹೆಂಗಸರು ಈಗಲೂ ಸೀರೆಯುಡುವುದು ಸೊಂಟದಲ್ಲಿ ಬಲಕ್ಕೆ ಸೆರಗನ್ನು ಮಾಡಿ.

ಈ ಕಥೆಯು ಧ್ವನಿಸುವ ಪ್ರಧಾನ ಅಂಶವೆಂದರೆ, ಕಾವೇರಿಯಮ್ಮ ಯಾಜಮಾನಿಕೆಯನ್ನು ಸಹಿಸಲಾರಳೆಂಬುದು. ಗಂಡನನ್ನು ತೊರೆದು ಹರಿಯುವ ಅವಳಿಗೆ ಕರ್ನಾಟಕ, ತಮಿಳುನಾಡೆನೆಂಬ ಭೇದವಿಲ್ಲ. ಅವಳು ನಮಗೆ ನದಿಯಾಗಿ ಸಿಕ್ಕಿರುವುದೇ ನಮ್ಮ ಪೂರ್ವಪುಣ್ಯ ಸುಕೃತವೆಂದು ತಿಳಿಯಬೇಕು. ಅವಳನ್ನಿಟ್ಟುಕೊಂಡು ಅನಾಗರಿಕರಂತೆ ವರ್ತಿಸುತ್ತಿದ್ದೇವೆ. ನೆಲ ಜಲ ಗಡಿ ಭಾಷೆಯ ವಿಷಯದ ವಿಚಾರದಲ್ಲಿ ಹೊಲಸು ರಾಜಕೀಯವೊಂದು ಸೇರಿಕೊಂಡರೆ ಏನೇನಾಗುತ್ತದೆಂಬುದನ್ನು ಕಾವೇರಿಯ ವಿಚಾರವೊಂದೇ ಅಲ್ಲ. ಮಹದಾಯಿ, ಮೇಕದಾಟು, ಕೃಷ್ಣಾ, ಕಾಸರಗೋಡು, ಬೆಳಗಾವಿ, ಕಾರವಾರ- ಇವೆಲ್ಲವೂ ಕರ್ನಾಟಕವನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳೇ ಆಗಿ ಬೆಳೆಯುತ್ತಿವೆ. ಇಂಥ ಸಮಸ್ಯೆಗಳು ಜ್ವಲಂತವಾಗಿ ಇರೋವರೆಗೆ ರಾಜಕಾರಣಿಗಳು ಸೇಫಾಗಿರುತ್ತಾರೆ. ಗಂಡನಿಂದ ವಿಮೋಚನೆಯನ್ನು ಪಡೆದ ಕಾವೇರಿ ಯಾರ ಹಂಗಿಲ್ಲದೆ, ಲಂಗುಲಗಾಮಿಲ್ಲದೆ ಸ್ವೇಚ್ಛೆಯಾಗಿ ಹರಿದರೂ ಜನರ ನಿತ್ಯದ ಬದುಕಿಗೆ ಮಾರಕವಾದ ಸಾಕ್ಷ್ಯಗಳಿಲ್ಲ. ಕರ್ನಾಟಕಕ್ಕಿಂತಲೂ ತನ್ನ ಮೈಯ ಹೆಚ್ಚಿನ ಭಾಗವನ್ನು ತಮಿಳುನಾಡಿನಲ್ಲಿ ಆನಿಸಿಕೊಂಡಿರುವ ಕಾವೇರಿ ಹುಟ್ಟಿದ್ದು ಪಶ್ಚಿಮ ಘಟ್ಟಗಳ ಸಾಲಿನಲ್ಲಿಯೇ. ನಮ್ಮಲ್ಲಿ ನದಿಯಾಗಿ ಕಾಣುವ ಇವಳು ತಮಿಳಿಗರಿಗೆ ಅಂತರ್ಜಲವಾಗಿಯೂ ಇದ್ದಾಳೆ.

ಈ ನದಿನೀರಿನ ಹಂಚಿಕೆಯ ವಿಷಯದಲ್ಲಿ ಸುಪ್ರೀಂಕೋರ್ಟ್ ಕೇಂದ್ರಸರ್ಕಾರಕ್ಕೆ ಸ್ಕೀಂ ಒಂದನ್ನು ಮಾಡುವಂತೆ ಆದೇಶಿಸಿತ್ತು. ಗಂಡನನ್ನೇ ಧಿಕ್ಕರಿಸಿದ ಕಾವೇರಿಗೆ ಇದು ಒಂದು ರೀತಿಯಲ್ಲಿ ಮೂಗುದಾರವೇ ಅನಿಸಿತ್ತು. ಕೋರ್ಟ್ ತೀರ್ಪನ್ನೇ ಪ್ರಶ್ನಿಸಿ ಕೇಂದ್ರ ಸರ್ಕಾರವನ್ನು ಜರೆಯುತ್ತ ತಮಿಳಿಗರು ಬೀದಿಗೆ ಬಂದು ಇಲ್ಲಸಲ್ಲದ ರಂಪಾಟ ಮಾಡಿದ್ದನ್ನೂ ದೇಶವೇ ನೋಡಿದೆ. ಎರಡೂ ಕಡೆಯಲ್ಲಿ ಸಿನೆಮಾ ಮಂದಿ ಇದಕ್ಕೆ ಕೈಜೋಡಿಸಿ ಪ್ರತಿರೋಧವನ್ನು ನೀಡಿದ್ದನ್ನೂ ದೇಶವೇ ನೋಡಿದೆ. ಆ ಮೂಲಕ ತಮ್ಮ ತಮ್ಮ ಜನಪ್ರಿಯತೆ ಮತ್ತು ಜನಪ್ರಸಿದ್ಧಿಯನ್ನು ರಾಜಕೀಯದಲ್ಲಿ ಸಾಬೀತು ಮಾಡಿಕೊಳ್ಳಲು ಪ್ರಯತ್ನಿಸಿದ್ದನ್ನು ನೋಡಿದ್ದೇವೆ. ಇಲ್ಲಿಯವರೆಗೆ ಕನ್ನಡಿಗರನ್ನೂ ತಮಿಳಿಗರನ್ನೂ ಪೊರೆದವಳು ಇದೇ ಕಾವೇರಿಯಮ್ಮನೇ ಎಂಬುದನ್ನೂ ಮರೆತು ಆಗಬಾರದ ಅನಾಹುತ ಆಗಿಯೇ ಹೋಯಿತೆಂಬಂತೆ ತಮಿಳುನಾಡಿನಲ್ಲಿ ಬಂದ್ ಆಚರಣೆಗಳು ನಡೆದಿವೆ. ಸಾರ್ವಜನಿಕ ಸ್ವತ್ತುಗಳು ನಾಶಯಾಗುವುದು ಸೇರಿ ಇಂಥ ಸಂದರ್ಭದಲ್ಲಿ ಸಹಜವಾಗೇ ದುಷ್ಕೃತ್ಯಗಳೂ ನಡೆಯುತ್ತವೆ. ಬೃಹತ್ ಸಮೂಹದಲ್ಲಿ ನಡೆಯುವ ವಿರೋಧ-ಪ್ರತಿರೋಧಗಳು ಆತ್ಯಂತಿಕವಾಗಿ ನಿಯಂತ್ರಣಕ್ಕೆ ಬರದೆ ಜನಸಾಮಾನ್ಯರ ನಿತ್ಯದ ಬದುಕನ್ನು ಕು ಹೈರಾಣಾಗಿಸುತ್ತದೆ.

ತಮಗೆ ಸಿಗುವ ನೀರು ಯಾವುದಕ್ಕೂ ಸಾಲದೆಂಬುದು ವರ್ಷಕ್ಕೆ ಮೂರು ಬೆಳೆಗಳನ್ನು ಬೆಳೆಯುವ ತಮಿಳಿಗರ ಬೊಬ್ಬೆ ಸುಪ್ರೀಂಕೋರ್ಟ್ ಮೆಟ್ಟಿಲನ್ನೇರುತ್ತದೆ. ನಮ್ಮಲ್ಲಿ ಮಂಡ್ಯ, ಮೈಸೂರು, ಬೆಂಗಳೂರಿಗೆ ಕುಡಿಯುವ ನೀರು ಸರಬರಾಜು ಕಾವೇರಿಯಿಂದಲೇ ಆಗಬೇಕು. ಮಂಡ್ಯದ ಸುತ್ತಮುತ್ತಲ ರೈತಾಪಿ ಜೀವನ ನಡೆಯುವುದು ನಮ್ಮ ಜೀವನದಿ ಕಾವೇರಿಯಿಂದ ಎಂಬುದು ತಮಿಳು ರಾಜಕೀಯಕ್ಕೆ ಗೊತ್ತಿದೆ. ಹರಿಯುವ ನದಿಗೆ ಅಣೆಕಟ್ಟನ್ನು ಕಟ್ಟಿ ನಿತ್ಯದ ಬದುಕಿಗೆ ಮತ್ತು ಬೆಳೆಯನ್ನು ಬೆಳೆಯುವುದಕ್ಕೆ ಮಾತ್ರ ಬಳಸಿಕೊಳ್ಳುವ ನಾವು ಯಾವತ್ತೂ ಕಾವೇರಿಯ ನೀರನ್ನು ಬಿಡುವುದಿಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪನ್ನು ವಿರೋಧಿಸಿ, ಆ ಕ್ಷಣಕ್ಕೆ ವಿರೋಧಿಸಿದರೂ ಬಿಡುವುದೇ ಇಲ್ಲ ಎಂದು ಹೇಳಿದ್ದು ಇಲ್ಲವೇನೋ! ಅದರೂ ಕಾವೇರಿಯೇ ನಮ್ಮದು, ನಮಗೇ ಪೂರ್ತಿ ನೀರು ಬಿಡಬೇಕು ಎಂದು ಯಾವತ್ತೂ ಬೊಬ್ಬಿಡುವವರು ತಮಿಳಿಗರೇ ಹೊರತು ಕನ್ನಡಿಗರಲ್ಲ! ನೀರು ಸಾಕಷ್ಟಿದ್ದಾಗ ಇದ್ದಾಗ ಬಿಟ್ಟಿದ್ದೇವೆ. ನೀರು ಇಲ್ಲದಾಗಲೂ ಹಂಚಿಕೊಂಡು ದೊಡ್ಡತನವನ್ನೇ ಮೆರೆದಿದ್ದೇವೆ. ಜಯಲಲಿತಾ ಕಾಲದಲ್ಲಿ ತಮಿಳುನಾಡಿಗೆ ನೀರು ಬಿಡಬೇಕು ಎಂದು ಕೋರ್ಟು ಆದೇಶವಿತ್ತಾಗಲೆಲ್ಲ ನಮ್ಮವರ ವಿರೋಧದ ನಡುವೆಯೂ ನೀರನ್ನು ಬಿಟ್ಟು ಔದಾರ್ಯ ಮೆರೆದವರು ನಾವೇ. ಪ್ರಾಯಃ ತಮಿಳಿಗರ ಪಾಲಿಗೆ ಇವೆಲ್ಲ ನಮ್ಮ ದೌರ್ಬಲ್ಯವೆನಿಸಿರಬೇಕು. ದಿನದಿನವೂ ಬೆಳೆಯುತ್ತಲೇ ಇರುವ ಬೆಂಗಳೂರಲ್ಲಿ ತಮಿಳಿಗರೂ ಬದುಕನ್ನು ಕಟ್ಟಿಕೊಂಡಿದ್ದಾರೆ. ಅವರ ದಾಹವನ್ನೂ ಇದೇ ಕಾವೇರಿಯೇ ನೀಗಿಸುತ್ತಿದೆ. ನದಿ ನೆಲ ಗಡಿ ಭಾಷೆಯ ವಿಚಾರವನ್ನು ಯಾವತ್ತೂ ಒಟ್ಟೂ ವಿವೇಕ ಮತ್ತು ವಿವೇಚನೆಯಿಂದಲೇ ಈಡೇರಿಸಿಕೊಳ್ಳಬೇಕು. ಕಾಯ್ದೆ, ಕಾನೂನು, ಕಟ್ಟಳೆಗಳು ಯಾವತ್ತೂ ಸಂಘರ್ಷವನ್ನೇ ಉಂಟುಮಾಡುತ್ತದೆ. ನೀರನ್ನು ಯಾವ್ಯಾವ ಸಂದರ್ಭದಲ್ಲಿ ಯಾರು ಎಷ್ಟು ವಿನಿಯೋಗಿಸಬೇಕೆಂಬುದನ್ನು ಸರ್ಕಾರದ ಮಟ್ಟದಲ್ಲಿ ಚಿಂತನೆಯಾಗುವಾಗ ಎರಡೂ ಕಡೆಯ ರೈತರು, ಜಲಸಂಪನ್ಮೂಲ ತಜ್ಞರು, ಹವಾಮಾನ ಇಲಾಖೆಯ ಅಧಿಕಾರಿಗಳು ಒಳಗೊಂಡಿರಬೇಕು. ಋತುಮಾನಗಳಿಗನುಸಾರವಾಗಿ ಬೆಳೆಯಬೇಕಾದ ಬೆಳೆಗಳ ಬಗ್ಗೆ ರೈತರು ರಾಜಕೀಯವನ್ನು ಹೊರಗಿಟ್ಟು ವೈಜ್ಞಾನಿಕವಾಗಿ ಚರ್ಚಿಸಬೇಕು. ಕುಡಿಯುವ ನೀರಿಗೆ ಮೊದಲ ಪ್ರಾಶಸ್ತ್ಯ ಕೊಟ್ಟು ಉಳಿದ ನೀರಿನಲ್ಲಿ ಹಂಚಿಕೆಯೆಂಬುದು ಸಾಮರಸ್ಯದ ನೆಲೆಯಲ್ಲಿ ಒಮ್ಮತದ ತೀರ್ಮಾನಗಳು ಕೇಂದ್ರದ ಮಧ್ಯಸ್ಥಿಕೆಯಲ್ಲೇ ನಡೆದರೆ ಭವಿಷ್ಯದ ದೃಷ್ಟಿಯಿಂದ ಅತ್ಯುತ್ತಮವಾದುದು. ಇಲ್ಲವಾದಲ್ಲಿ ಈ ಕಿತ್ತಾಟಗಳು, ಗಲಾಟೆಗಳು, ರೋಷಾವೇಷಗಳು ಜನಸಾಮಾನ್ಯರ ಬದುಕನ್ನು ಹಿಂಜಿ ಹಿಪ್ಪೆ ಮಾಡಿ ಹೈರಾಣಾಗಿಸುತ್ತಲೇ ಇರುತ್ತದೆ. ಅನಕ್ಷರಸ್ಥರ, ಬಡವರ, ಸಾಮಾನ್ಯರ ಕಣ್ಣೀರಿಗೆ ಕಾರಣವಾಗುತ್ತಲೇ ಕಾವೇರಿಯ ಸಮಸ್ಯೆಯನ್ನು ಜೀವಂತವಾಗಿಟ್ಟುಕೊಳ್ಳಲು ಎರಡೂ ಕಡೆಯ ಹೊಲಸು ರಾಜಕೀಯ ಅಭಿವ್ಯಕ್ತಿಸುತ್ತಲೇ ಇರುತ್ತದೆ.

ತಮಿಳುನಾಡಿನ ರೈತರು ಕಾವೇರಿಯ ವಿಚಾರದಲ್ಲಿ ಸಿಗುವ ಮಿತನೀರಿನಲ್ಲಿ ಸಾಧ್ಯವಾಗುವಷ್ಟು ಬೆಳೆಯನ್ನು ಮಾತ್ರ ಬೆಳೆಯಬೇಕು. ಮಳೆ ಚೆನ್ನಾಗಿ ಆದಾಗ ಬೆಳೆ ಬೆಳೆಯುವುದಕ್ಕೆ ಯಾವ ಸಮಸ್ಯೆಯೂ ಇರುವುದಿಲ್ಲ. ಈ ವಿಚಾರ ಚುನಾವಣೆಯ ವಿಷಯವಾಗದಂತೆ ಎಚ್ಚರವನ್ನು ಎರಡೂ ಕಡೆಯ ರೈತಾಪಿ ವರ್ಗ ಮತ್ತು ಜನತೆ ಎಚ್ಚರವಹಿಸಬೇಕು. ಸಿನೆಮಾದವರು ಮತ್ತು ರಾಜಕೀಯದವರು ತಮ್ಮ ಖ್ಯಾತಿಗಾಗಿ ಇವುಗಳನ್ನು ಬಳಸದಂತೆ ಎಚ್ಚರವಹಿಸಬೇಕು. ಒಂದೇ ಒಂದು ಹನಿ ನೀರು ಬಿಡುವುದಿಲ್ಲ ಎಂಬ ಮಾತು ಎಷ್ಟು ಮೂರ್ಖತನದ್ದೋ, ಅಷ್ಟೇ ಮೂರ್ಖತನದ್ದು ಸಂಪೂರ್ಣ ನೀರನ್ನು ನಮಗೇ ಬಿಡಿಯೆನ್ನುವ ಮಾತು ಕೂಡ!

ನಾವು ಯಾರೂ ಒಂದು ದ್ವೀಪವಾಗಿ ಬದುಕುತ್ತಿಲ್ಲ. ಹಾಗೆ ಬದುಕಲು ಸಾಧ್ಯವೂ ಇಲ್ಲ. ನಮ್ಮ ಸುತ್ತಲೂ ಸಾಂಸ್ಕೃತಿಕವಾದ, ಭೌಗೋಳಿಕವಾದ, ಚಾರಿತ್ರಿಕವಾದ ಆವರಣವಿದೆ. ಅದನ್ನು ಕಳಚಿ ಬದುಕುವುದು ದುಃಸ್ಸಾಹಸವೇ ಸರಿ. ಅಂಥ ದುಃಸ್ಸಾಹಸಕ್ಕೆ ಕೈಹಾಕಿದರೆ ನಾಶ ಕಟ್ಟಿಟ್ಟದ್ದೇ! ಪರಸ್ಪರ ಕಚ್ಚಾಡುವುದು ತರವಲ್ಲ. ಶೋಭೆಯಲ್ಲ. "ಇದ್ದಾಗ ನೀರನ್ನು ಬಿಟ್ಟಿದ್ದಾರೆ, ಬಿಡುತ್ತಾರೆ. ಅವರಿಗೇ ಇಲ್ಲದ ಮೇಲೆ ನಮಗೆ ಹೇಗೆ ಬಿಡಲು ಸಾಧ್ಯ?" ಎಂದು ಹಿಂದೊಮ್ಮೆ ತಮಿಳು ನಟ ಸಿಂಬು ಆಡಿದ ಮಾತಲ್ಲಿ ಸಾರ್ವಕಾಲಿಕ ಪ್ರಜ್ಞೆಯಿದೆ. ಯಾವ ಬಗೆಯಲ್ಲಾದರೂ ಕನ್ನಡ ಮತ್ತು ತಮಿಳಿನ ನೆಲವನ್ನು ಹಸಿರುಗೊಳಿಸುತ್ತಲೇ ಇರುವ ಕಾವೇರಿ ಕರ್ನಾಟಕಕ್ಕೆ ಜೀವನದಿ. ಅದು ಹರಿದುಹೋಗುವ ನೆಲಕ್ಕೂ ಜೀವನದಿಯಾಗೇ ಇರುತ್ತಾಳೆ. ನದಿಯ ಸ್ವಭಾವವೇ ನೆಲವನ್ನು ತಂಪುಗೊಳಿಸುವುದು. ಅಂಥ ನದಿಯ ನೀರನ್ನು ಕುಡಿದ ನಾವುಗಳು ಯಾಕೆ ರೋಷಗೊಳ್ಳುವುದು? ದ್ವೇಷವನ್ನು ಬೆಳೆಸಿಕೊಳ್ಳುವುದು? ಯಾವ ಪುರುಷಾರ್ಥಕ್ಕಾಗಿ ಈ ದ್ವೇಷ?

ಅಷ್ಟಕ್ಕೂ ಕೆಆರ್ ಎಸ್ ಡ್ಯಾಮ್ ಕಟ್ಟುವಾಗ ತಮಿಳುನಾಡಿನ ಕೊಡುಗೆಯೇನು? ಯಾಕೆ ಕೋರ್ಟು, ಪ್ರಾಧಿಕಾರ, ಜಲಮಂಡಳಿಯ ತೀರ್ಪು ಯಾವತ್ತೂ ಕರ್ನಾಟಕದ ವಿರುದ್ಧವೇ ಬರುತ್ತದೆ? ಕಾನೂನಿನ ಮೂಲಕ ನೀರನ್ನು ಕೇಳುವ ತಮಿಳುನಾಡು ಸರ್ಕಾರ ಜಲಾಗಾರದೊಳಗಿನ ಮಣ್ಣು ಹೂಳೆತ್ತುವ ಕಾರ್ಯಕ್ಕೆ ಅಥವಾ ಡ್ಯಾಮ್ ನಿರ್ವಹಣೆಗೆ ಏನು ಸಹಾಯ ಮಾಡಿದೆ? ಮೇಕೆದಾಟು ಯೋಜನೆಗೆ ತಮಿಳುನಾಡು ವಿರೋಧಿಸಲು ಇರುವ ನೈತಿಕ ಕಾರಣ ಯಾವುದು? ನೀರಿಲ್ಲದಿದ್ದರೂ ನೀರು ಬಿಡಬೇಕು ಎಂಬ ತೀರ್ಪು ಯಾವ ಆಧಾರದ ಮೇಲೆ ಪ್ರಕಟವಾಗುತ್ತದೆ? ಹಾಗಿದ್ದಲ್ಲಿ ವಾದಗಳು ಸೋಲುತ್ತಿವೆಯೆ? ಅಥವಾ ಸುಳ್ಳಾಗುತ್ತಿವೆಯೆ? ಕರ್ನಾಟಕ ಸರ್ಕಾರ ಕೋರ್ಟು ವ್ಯವಹಾರಕ್ಕೆ ಈವರೆಗೆ ವ್ಯಯಿಸಿದ ಹಣ ಎಷ್ಟು ಕೋಟಿ? ಇಂಥ ಹತ್ತಾರು ಪ್ರಶ್ನೆಗಳಿಗೆ ಉತ್ತರವೆಲ್ಲಿ ಸಿಗುತ್ತದೆ? ಒಂದಂತೂ ಸತ್ಯ: ಕಾನೂನು ವ್ಯಾಪ್ತಿಯಿಂದ ಹೊರಗೆ ಇದನ್ನು ಬಗೆಹರಿಸಿಕೊಳ್ಳುವುದು ಭವಿಷ್ಯದ ದೃಷ್ಟಿಯಿಂದ ಎರಡೂ ರಾಜ್ಯಗಳಿಗೆ ಶ್ರೇಯಸ್ಕರವಾದುದು.

ಕರುಣಾನಿಧಿಯವರಿದ್ದ ಸಭೆಯಲ್ಲಿ ನಮ್ಮ ಜೆಎಚ್ ಪಟೇಲರು ಹೇಳಿದ್ದು: "ಕರ್ನಾಟಕದ ಮುಖ್ಯಮಂತ್ರಿಯಾಗಿ ನಾನು ತಮಿಳಿನ ರೈತರ ಬಗ್ಗೆ ಯೋಚಿಸಬೇಕು. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಕರುಣಾನಿಧಿಯವರು ನಮ್ಮ ರೈತರ ಹಿತದ ಬಗ್ಗೆ ಆಸಕ್ತಿ ತೋರಬೇಕು. ಈ ಸಮಸ್ಯೆಯನ್ನು ಹೀಗೆ ಮಾತ್ರ ನಾವು ಪರಿಹರಿಸಿಕೊಳ್ಳಲು ಸಾಧ್ಯ". ಒಬ್ಬ ರಾಜಕಾರಣಿಯಾಗಿ, ರಾಜಕೀಯವಲ್ಲದ ಮಾತನ್ನು ನಮ್ಮ ಪಟೇಲರು ಆಡಿದ್ದು ರಾಜಕೀಯದಲ್ಲಿ ಒಪ್ಪಿತವಾಗಲೇ ಇಲ್ಲ. ಈ ಅರಿವಿನಲ್ಲೇ ಶಾಶ್ವತ ಪರಿಹಾರ ಇರೋದು! ಇಲ್ಲದಿದ್ದರೆ, ಈ ವಿಚಾರದಲ್ಲಿ ಅಧಿಕಾರರೂಢ ಪಕ್ಷದ ಯಾವುದೇ ನಿಲುವನ್ನು ವಿರೋಧಿಸುವ ಪಕ್ಷವೂ ಹಿಂದೆ ತಾನು ಅಧಿಕಾರದಲ್ಲಿದ್ದಾಗ ಮಾಡಿದ್ದನ್ನು ಮುಚ್ಚಿಕೊಂಡೇ ವಿರೋಧಿಸುವುದು! ಇದು ಕಾವೇರಿ ವಿಚಾರದಲ್ಲಿ ಮಾತ್ರ ನಿರಂತರವಾಗಿ ನಡೆದುಕೊಂಡು ಬಂದ ರಾಜಕೀಯದೊಳಗಿನ ಹೊಲಸು ರಾಜಕೀಯ!

## ಪಾರ್ಕ್ ಜಾಗ ಮುಟ್ಟುಗೋಲು ಬೇಡ: ಎನ್.ರವಿಕುಮಾರ್

● ವಿಕ್ರಮ ವಾಹಿನಿ । ಬೆಂಗಳೂರು

ಉದ್ಯಾನವನಗಳ ಜಾಗವನ್ನು ಸರಕಾರ ಯಾವುದೇ ಕಾರಣಕ್ಕೂ ತೆಗೆದುಕೊಳ್ಳಬಾರದು; ಮುಟ್ಟುಗೋಲು ಹಾಕಬಾರದು ಎಂದು ವಿಧಾನ ಪರಿಷತ್ತಿನ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ಒತ್ತಾಯಿಸಿದ್ದಾರೆ.



ಮಲ್ಲೇಶ್ವರದ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಸೇರಿ ದೊಡ್ಡ ಶಹರ, ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳಲ್ಲಿ ಪಾರ್ಕ್‌ಗಳಲ್ಲಿ ಶೇ 5ರಷ್ಟು ಜಾಗ ತೆಗೆದುಕೊಳ್ಳಬೇಕು. ಆ ಜಾಗವನ್ನು ವಾಣಿಜ್ಯೀಕರಣ ಮಾಡುವ ಉದ್ದೇಶದಿಂದ ಸರಕಾರವು ನಿರ್ಣಯ ಮಾಡಿದ್ದು, ಇದನ್ನು ಬಿಜೆಪಿ ವಿರೋಧಿಸುತ್ತದೆ ಎಂದು ತಿಳಿಸಿದರು.

ಲಾಲ್ ಬಾಗ್, ಕಬ್ಬನ್ ಪಾರ್ಕ್ ಸೇರಿ ವಿವಿಧ ಉದ್ಯಾನವನಗಳ ಶೇ 5 ಜಾಗದ ವಾಣಿಜ್ಯೀಕರಣ ಸರಿಯಲ್ಲ. ಇಡೀ ರಾಜ್ಯದಲ್ಲಿ, ಬೆಂಗಳೂರಿನಲ್ಲಿ ಇರಬೇಕಾದಷ್ಟು ಪ್ರಮಾಣದ ಗಿಡಮರ, ಪಾರ್ಕ್‌ಗಳು ಇಲ್ಲ. ಇರುವ ಪಾರ್ಕ್‌ಗಳ ಒತ್ತುವರಿ ಆಗುತ್ತಿದೆ ಎಂದು ಆಕ್ಷೇಪಿಸಿದರು. ಸರಕಾರ ಇದನ್ನು ಮಾಡಬಾರದು. ವಾಹನಗಳು ಹೆಚ್ಚುತ್ತಿವೆ. ಬೆಂಗಳೂರಿನ ಮಾಲಿನ್ಯ ಪ್ರಮಾಣ ಹೆಚ್ಚಾಗುತ್ತಿದೆ ಎಂದು ತಿಳಿಸಿದರು.

**ನಾಗೇಂದ್ರ ಅವರ ರಾಜೀನಾಮೆ ಆಗಲೇಬೇಕು**

ನಾಗೇಂದ್ರ ಅವರ ರಾಜೀನಾಮೆ ನೀಡಲೇಬೇಕು ಎಂದು ಆಗ್ರಹಿಸಿದ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗಲೇ 187 ಕೋಟಿಯಲ್ಲ; 87 ಕೋಟಿ ಭ್ರಷ್ಟಾಚಾರ ಆಗಿದೆ ಎಂದು ಸದನದಲ್ಲೇ ಒಪ್ಪಿಕೊಂಡಿದ್ದಾರೆ. ಚಾರ್ಜ್‌ಶೀಟ್ ಆಗಿದೆ. ಚರ್ಚೆ ಮಾಡುವ ವಿಷಯವೇ ಇಲ್ಲ ಎಂದು ಹೇಳಿದರು.

ಹತ್ತಿರದ ಬಂಧುಗಳಿಗೆ, ಸಂಬಂಧಿಕರು, ಸ್ನೇಹಿತರಿಗೆ ಹಣ ಕಳಿಸಿದ್ದಾರೆ. ಬಳ್ಳಾರಿ ಸಂಸದರ ಚುನಾವಣೆ, ತೆಲಂಗಾಣ ಚುನಾವಣೆಗೂ ಹಣ ಬಳಕೆ ಆಗಿದೆ. ನಾಗೇಂದ್ರ ಅವರ ರಾಜೀನಾಮೆ ಆಗಲೇಬೇಕು; ಅವರು ರಾಜೀನಾಮೆ ಕೊಡುವವರೆಗೆ ಬಿಜೆಪಿ ಹೋರಾಟ ಮಾಡಲಿದೆ ಎಂದು ಎಚ್ಚರಿಕೆ ನೀಡಿದರು.

**ಬರಗಾಲ ಪ್ರದೇಶ ಘೋಷಣೆ ಯಾಕಿಲ್ಲ?**

ಎಲ್ಲ ಸಚಿವರೂ ರಾಜ್ಯದ ಬರಗಾಲದ ಕುರಿತಂತೆ ಮಾತನಾಡುತ್ತಾರೆ. ಯಾಕೆ ಬರ ಪ್ರದೇಶ ಎಂದು ಘೋಷಿಸುತ್ತಿಲ್ಲ ಎಂದು ಪ್ರಶ್ನಿಸಿದರು. ಎಂದೂ ಕಂಡರಿಯದ ಬರಗಾಲ ಕರ್ನಾಟಕದಲ್ಲಿದೆ. ರೈತರೂ ಕಂಗಾಲಾಗಿದ್ದಾರೆ. ದನಕರುಗಳಿಗೆ ನೀರಿಲ್ಲ. ಜನರಿಗೆ ಕುಡಿಯಲೂ ನೀರಿಲ್ಲ. ಮುಂಗಾರು ಬೆಳೆ ಸಂಪೂರ್ಣ ಕೈಕೊಟ್ಟು ಹೋಗಿದೆ. ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು. ಸರಕಾರ ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಬೇಕು ಎಂದು ಆಗ್ರಹವನ್ನು ಮುಂದಿಟ್ಟರು.

## ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೂ ರೂ 1 ಲಕ್ಷ ಶುಲ್ಕ!

1ನೇ ಪುಟದಿಂದ

ಆದರೆ ಕುಡಿಯುವ ನೀರು, ಶೌಚಾಲಯ ಹಾಗೂ ಸೂಕ್ತ ಬೆಳಕಿನಂತಹ ಮೂಲಸೌಕರ್ಯಗಳ ಕೊರತೆಯಿದೆ ಎಂಬ ಆರೋಪವೂ ಕೇಳಿಬಂದಿದೆ.

ಇಂತಹ ಪರಿಸ್ಥಿತಿಯಲ್ಲಿ ದಿನಕ್ಕೆ ರೂ 1 ಲಕ್ಷ ಬಾಡಿಗೆ ನಿಗದಿಪಡಿಸಿರುವುದು ಸಮಂಜಸವಲ್ಲ. ಸಣ್ಣ ಸಂಘಟನೆಗಳು ಹಾಗೂ ಸಾಮಾನ್ಯ ಜನರಿಗೆ ಇಷ್ಟು ಹಣ ಪಾವತಿಸಿ ಪ್ರತಿಭಟನೆ ನಡೆಸುವುದು ಕಷ್ಟವಾಗಲಿದೆ ಎಂದು ಹೋರಾಟಗಾರರು ಹೇಳಿದ್ದಾರೆ. ಶುಲ್ಕವನ್ನು ಮರುಪರಿಶೀಲಿಸಿ, ಪ್ರತಿಭಟನೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ನೇಪಾಳ ಪ್ರವಾಹ: ಮೋದಿ ನೆರವಿನ ಭರವಸೆ

1ನೇ ಪುಟದಿಂದ

**ರಕ್ಷಣಾ ಕಾರ್ಯಾಚರಣೆ ಚುರುಕು**

ಪ್ರವಾಹದ ಹಿನ್ನೆಲೆಯಲ್ಲಿ ನೇಪಾಳ ಸೇನೆ, ಸಶಸ್ತ್ರ ಪೊಲೀಸ್ ಪಡೆ ಹಾಗೂ ಪೊಲೀಸ್ ಸಿಬ್ಬಂದಿಯನ್ನು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಸೇನಾ ಹೆಲಿಕಾಪ್ಟರ್‌ಗಳ ಮೂಲಕ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ನದಿ ತೀರ ಹಾಗೂ ತಗ್ಗು ಪ್ರದೇಶಗಳಲ್ಲಿರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಅಧಿಕಾರಿಗಳು ಸೂಚಿಸಿದ್ದಾರೆ.

ಪ್ರವಾಹದ ನಿಖರ ಕಾರಣ ಹಾಗೂ ಸಂಪೂರ್ಣ ಹಾನಿಯ ಪ್ರಮಾಣ ಇನ್ನೂ ಸ್ಪಷ್ಟವಾಗಿಲ್ಲ. ಕೆಳಭಾಗದ ಹಲವು ಜಿಲ್ಲೆಗಳಿಗೂ ಎಚ್ಚರಿಕೆ ನೀಡಲಾಗಿದ್ದು, ನದಿ ತೀರದ ಜನರು ಸುರಕ್ಷಿತ ಪ್ರದೇಶಗಳಿಗೆ ತೆರಳುವಂತೆ ಸೂಚಿಸಲಾಗಿದೆ.

ಪ್ರವಾಹದಿಂದ ರಸುವಾ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ಸಂಪರ್ಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿದ್ದು, ರಸ್ತೆ ಹಾಗೂ ಸೇತುವೆಗಳು ಹಾನಿಗೊಳಗಾಗಿವೆ. ವಿದ್ಯುತ್ ಪೂರೈಕೆಯಲ್ಲೂ ವ್ಯತ್ಯಯ ಉಂಟಾಗಿರುವುದರಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಪ್ರವಾಹದ ನೀರಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿದ್ದಾರೆ. ತುರ್ತು ಸಂದರ್ಭದಲ್ಲಿ ನೆರವು ನೀಡಲು ರಕ್ಷಣಾ ತಂಡಗಳನ್ನು ಸನ್ನದ್ಧವಾಗಿರಿಸಲಾಗಿದೆ. ಏತನ್ಮಧ್ಯೆ, ಪೀಡಿತ ಪ್ರದೇಶಗಳಲ್ಲಿರುವ ಜನರು ಎಚ್ಚರಿಕೆಯಿಂದ ಇರಬೇಕು ಹಾಗೂ ಅಧಿಕಾರಿಗಳ ಸೂಚನೆಗಳನ್ನು ಪಾಲಿಸಬೇಕು ಎಂದು ನೇಪಾಳ ಸರ್ಕಾರ ಮನವಿ ಮಾಡಿದೆ. ಭಾರತವೂ ಪರಿಸ್ಥಿತಿಯ ಕುರಿತು ನಿಗಾ ವಹಿಸಿದ್ದು, ಅಗತ್ಯ ನೆರವು ಒದಗಿಸಲು ಸಿದ್ಧವಾಗಿದೆ.

## 105 ಭಾರತೀಯರು ಸೇರಿ 400 ಮಂದಿ ನಾಪತ್ತೆ

1ನೇ ಪುಟದಿಂದ

ಪ್ರವಾಹದಿಂದ ಹಲವು ಪ್ರಮುಖ ಹೆದ್ದಾರಿಗಳು ಹಾಗೂ ಸಂಪರ್ಕ ರಸ್ತೆಗಳು ಹಾನಿಗೊಳಗಾಗಿದ್ದು, ರಕ್ಷಣಾ ತಂಡಗಳ ಸಂಚಾರಕ್ಕೂ ತೊಂದರೆಯಾಗಿದೆ. ಕೆಲವು ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದರಿಂದ ಜನಜೀವನ ಮತ್ತಷ್ಟು ಅಸ್ತವ್ಯಸ್ತಗೊಂಡಿದೆ. ಪರಿಹಾರ ಸಾಮಗ್ರಿಗಳನ್ನು ಪೀಡಿತ ಪ್ರದೇಶಗಳಿಗೆ ತಲುಪಿಸಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ನದಿ ತೀರ ಹಾಗೂ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಕಾರ್ಯವೂ ನಡೆಯುತ್ತಿದೆ. ನೀರಿನ ಮಟ್ಟದಲ್ಲಿ ಮತ್ತೆ ಏರಿಕೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಸ್ಥಳೀಯ ಆಡಳಿತವು ಜನರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿದೆ.

ಇದೇ ವೇಳೆ, ಪ್ರವಾಹದಲ್ಲಿ ಸಿಲುಕಿರುವ ವಿದೇಶಿ ಪ್ರವಾಸಿಗರು ಹಾಗೂ ಸ್ಥಳೀಯರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲು ವಿಶೇಷ ತಂಡಗಳನ್ನು ನಿಯೋಜಿಸಲಾಗಿದೆ. ನಾಪತ್ತೆಯಾದವರ ಕುಟುಂಬಗಳಿಗೆ ಮಾಹಿತಿ ನೀಡುವ ಹಾಗೂ ರಕ್ಷಣಾ ಕಾರ್ಯಾಚರಣೆಯನ್ನು ಸಮನ್ವಯಗೊಳಿಸುವ ಪ್ರಯತ್ನಗಳು ಮುಂದುವರಿದಿವೆ.

ಪ್ರವಾಹದಿಂದ ಗಡಿ ಪ್ರದೇಶಗಳಲ್ಲಿನ ವ್ಯಾಪಾರ ಮತ್ತು ಸಾರಿಗೆ ಚಟುವಟಿಕೆಗಳ ಮೇಲೂ ಪರಿಣಾಮ ಬೀರಿದೆ. ಪ್ರಮುಖ ಸಂಪರ್ಕ ಮಾರ್ಗಗಳು ಹಾನಿಗೊಳಗಾಗಿರುವುದರಿಂದ ಜನರು ಹಾಗೂ ಸರಕುಗಳ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಪರಿಸ್ಥಿತಿ ಸಹಜ ಸ್ಥಿತಿಗೆ ತರುವ ನಿಟ್ಟಿನಲ್ಲಿ ರಸ್ತೆ ಹಾಗೂ ಸೇತುವೆಗಳ ಹಾನಿ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಈ ನಡುವೆ, ಮುಂದಿನ ದಿನಗಳಲ್ಲಿ ಹವಾಮಾನ ಪರಿಸ್ಥಿತಿ ಹಾಗೂ ನದಿಗಳ ನೀರಿನ ಮಟ್ಟದ ಮೇಲೆ ಅಧಿಕಾರಿಗಳು ನಿಗಾ ವಹಿಸಿದ್ದಾರೆ. ತುರ್ತು ಪರಿಸ್ಥಿತಿ ಎದುರಾದರೆ ಜನರನ್ನು ಸ್ಥಳಾಂತರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ರಕ್ಷಣಾ ಹಾಗೂ ಪರಿಹಾರ ಕಾರ್ಯಾಚರಣೆಗಳನ್ನು ಮತ್ತಷ್ಟು ಚುರುಕುಗೊಳಿಸಲಾಗಿದೆ.

## ಶ್ರೀ ಕೃಷ್ಣ ಕಾಲೇಜಿನಲ್ಲಿ ನೂತನ ವಿದ್ಯಾರ್ಥಿಗಳಿಗೆ ಅದ್ದೂರಿ ಸ್ವಾಗತ



● ವಿಕ್ರಮ ವಾಹಿನಿ । ಬೆಂಗಳೂರು

ಶ್ರೀ ಕೃಷ್ಣ ಪದವಿ ಕಾಲೇಜಿನ ವತಿಯಿಂದ 2026-27ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭವನ್ನು ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ. ರಮೇಶ್ ಅವರು ಆಗಮಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾರ್ಗದರ್ಶನ ನೀಡಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಡಾ. ಮನಮೋಹನ್ ಸಿಂಗ್, ಸ್ನಾತಕೋತ್ತರ ಪದವಿ ಕೇಂದ್ರದ ನಿರ್ದೇಶಕರಾದ ಪ್ರೊ. ವೇಣುಗೋಪಾಲ್, ಸ್ನಾತಕೋತ್ತರ ಪದವಿ ಕೇಂದ್ರ ವಿಭಾಗದ ಪ್ರಾಂಶುಪಾಲರಾದ ಡಾ. ಕಮಲಸುಗಂಧಿ, ಶೈಕ್ಷಣಿಕ ನಿರ್ದೇಶಕರಾದ ಪ್ರೊ. ಮನೋಹರ್, ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಉಷಾ ಕುಮಾರಿ, ಸಂಜೆ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸುರೇಶ್ ಸೇರಿದಂತೆ ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಕುಲಪತಿ ಪ್ರೊ. ಬಿ. ರಮೇಶ್ ಅವರು, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕಾಗಿ ಭಾಷಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಹಾಗೂ ಶಿಕ್ಷಣದ ಮೂಲಕ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿ ಯುವಜನರನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತಿರುವ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯವನ್ನು ಶ್ಲಾಘಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ. ರುಕ್ಮಾಂಗದ ನಾಯ್ಡು ಅವರು, ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಮೂಲಾಧಾರವಾಗಿದ್ದು, ಉತ್ತಮ ಪ್ರಜೆ ಹಾಗೂ ಆದರ್ಶ ನಾಗರಿಕನಾಗಿ ರೂಪುಗೊಳ್ಳಲು ಶಿಕ್ಷಣವೇ ಪ್ರಮುಖ ಸಾಧನವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತರಗತಿಯ ಪಾಠದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆ ಹಾಗೂ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಕಾಲೇಜಿನಲ್ಲಿ ಲಭ್ಯವಿರುವ ಶೈಕ್ಷಣಿಕ ಹಾಗೂ ಇತರ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಉತ್ತಮ ಸಾಧನೆ ಮಾಡುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಕಾಲೇಜಿನ ಶೈಕ್ಷಣಿಕ ಚಟುವಟಿಕೆಗಳು, ವಿವಿಧ ವಿಭಾಗಗಳು ಹಾಗೂ ವಿದ್ಯಾರ್ಥಿಗಳಿಗೆ ಲಭ್ಯವಿರುವ ಸೌಲಭ್ಯಗಳ ಕುರಿತು ಪರಿಚಯಿಸಲಾಯಿತು. ಹೊಸ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

# ‘ಕರ್ನಾಟಕವೇ ಭಾರತದ ಪ್ರಗತಿಯ ಹೆಬ್ಬಾಗಿಲು; ಉತ್ತಮ ಆಡಳಿತಕ್ಕೆ ಆದ್ಯತೆ’

● ವಿಕ್ರಮ ವಾಹಿನಿ | ಬೆಂಗಳೂರು

“ನಾನು ಆತುರದ ವ್ಯಕ್ತಿ. ರಾಜ್ಯದ ಜನರು ಹಾಗೂ ದೇಶದ ಕಾಂಗ್ರೆಸ್ ಕಾರ್ಯಕರ್ತರು ನನ್ನ ಮೇಲೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನನ್ನ ಬಳಿ ಇರುವ ಸಮಯದಲ್ಲಿ ಉತ್ತಮ ಕೆಲಸ ಮಾಡಿ, ಪಕ್ಷವನ್ನು ಸಂಘಟಿಸಿ, ಕರ್ನಾಟಕವನ್ನು ದೇಶಕ್ಕೆ ಮಾದರಿ ರಾಜ್ಯವನ್ನಾಗಿ ಮಾಡುವ ಪ್ರಯತ್ನದಲ್ಲಿದ್ದೇನೆ” ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಇಂಡಿಯಾ ಟುಡೇ ರೌಂಡ್ ಟೇಬಲ್ ಕರ್ನಾಟಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, “ಕರ್ನಾಟಕದ ಮೂಲಕವೇ ಭಾರತದ ಪ್ರಗತಿ ಸಾಧ್ಯ. ಹೀಗಾಗಿ ರಾಜ್ಯದ ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡುತ್ತಿದ್ದೇನೆ” ಎಂದರು.

**‘ಕಾಂಗ್ರೆಸ್‌ನಲ್ಲಿ ಬಣಗಳಿಲ್ಲ’:** ಶಾಸಕರ ಅಸಮಾಧಾನ ಹಾಗೂ ಬಣ ರಾಜಕೀಯದ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, “ಕಾಂಗ್ರೆಸ್‌ನಲ್ಲಿ ಯಾವುದೇ ಬಣ ರಾಜಕೀಯವಿಲ್ಲ. ಕಾಂಗ್ರೆಸ್ ಪಕ್ಷವೇ ಒಂದು ಬಣ. ನನಗೂ ಸಿದ್ದರಾಮಯ್ಯ ಅವರಿಗೂ ಪ್ರತ್ಯೇಕ ಬಣಗಳಿಲ್ಲ. ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ” ಎಂದು ಸ್ಪಷ್ಟಪಡಿಸಿದರು.

“ನಮ್ಮಲ್ಲಿರುವ ಎಲ್ಲ ಶಾಸಕರು, ಎಂಎಲ್‌ಸಿಗಳು ಸಚಿವರಾಗಲು ಹಾಗೂ ನಿಗಮಗಳ ಅಧ್ಯಕ್ಷರಾಗಲು ಅರ್ಹರು. ಆದರೆ ಎಲ್ಲರಿಗೂ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ. ರಾಜಕೀಯದಲ್ಲಿ ಎಲ್ಲವನ್ನೂ ಅರಗಿಸಿಕೊಳ್ಳಬೇಕು. ಆಸೆ ಪಡುವುದು ತಪ್ಪಲ್ಲ, ಆದರೆ ಪಕ್ಷದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು” ಎಂದರು.

ತಮ್ಮ ರಾಜಕೀಯ ಅನುಭವವನ್ನು ನೆನಪಿಸಿಕೊಂಡ ಅವರು, “ಧರಂ ಸಿಂಗ್ ಅವರ ಅವಧಿಯಲ್ಲಿ ನಾನು ಹಾಗೂ ಪರಮೇಶ್ವರ್ ಸಚಿವ ಸ್ಥಾನದಿಂದ ವಂಚಿತರಾಗಿದ್ದೆವು. ಸಿದ್ದರಾಮಯ್ಯ ಅವರ ಸರ್ಕಾರದ ಆರಂಭದಲ್ಲೂ ನನಗೆ ಅವಕಾಶ ಸಿಕ್ಕಿರಲಿಲ್ಲ. ಇಂದು ನಾನು ಮುಖ್ಯಮಂತ್ರಿ, ಪರಮೇಶ್ವರ್ ಉಪಮುಖ್ಯಮಂತ್ರಿ” ಎಂದು ಹೇಳಿದರು.

**ಮಹಿಳೆಯರಿಗೆ ಸಂಪುಟದಲ್ಲಿ ಸ್ಥಾನ:** ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವುದು ಕಾಂಗ್ರೆಸ್ ಸರ್ಕಾರದ ಬದ್ಧತೆ ಮತ್ತು ಸಿದ್ಧಾಂತವಾಗಿದೆ. ಮುಂದಿನ ಎರಡು–ಮೂರು ದಿನಗಳಲ್ಲಿ ಮಹಿಳಾ ಸಚಿವರಿಗೆ ಸಂಪುಟದಲ್ಲಿ ಸ್ಥಾನ ದೊರೆಯಲಿದೆ ಎಂದು ಶಿವಕುಮಾರ್ ತಿಳಿಸಿದರು.

**‘ಸಿಎಂ ಸ್ಥಾನದಲ್ಲಿ ಕುಳಿತಾಗ ಎಲ್ಲರೂ ಸಮಾನ’:** ಮಾಜಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ವಿಚಾರವನ್ನು ಸಮರ್ಥಿಸಿಕೊಂಡ ಅವರು, “ನಾನು ಕಾಂಗ್ರೆಸ್‌ನಿಂದ ಬಂದಿದ್ದರೂ ಇಡೀ ರಾಜ್ಯದ ಮುಖ್ಯಮಂತ್ರಿ. ಅಧಿಕಾರದ ಸ್ಥಾನದಲ್ಲಿ ಕುಳಿತಾಗ ಸಮಾಜದ ಎಲ್ಲ ವರ್ಗದವರನ್ನೂ ಒಟ್ಟಿಗೆ ಕರೆದುಕೊಂಡು ಹೋಗಬೇಕು. ನ್ಯಾಯದ ಪೀಠದಲ್ಲಿ ಕುಳಿತು ಅನ್ಯಾಯ ಮಾಡಬಾರದು. ಎಲ್ಲರನ್ನೂ ಸಮಾನವಾಗಿ ಕಾಣುವುದು ನನ್ನ ಕರ್ತವ್ಯ” ಎಂದರು.



ಬೆಂಗಳೂರಿನ ಖಾಸಗಿ ಹೊಟೇಲ್ ನಲ್ಲಿ ಬುಧವಾರ ನಡೆದ ’ಇಂಡಿಯಾ ಟುಡೇ ರೌಂಡ್ ಟೇಬಲ್ ಕರ್ನಾಟಕ’ ಸಂವಾದದಲ್ಲಿ ಸಿಎಂ ಡಿ ಕೆ ಶಿವಕುಮಾರ್ ಅವರು ಭಾಗವಹಿಸಿದರು.

**ಕೇಂದ್ರದಿಂದ ದಕ್ಷಿಣಕ್ಕೆ ಅನ್ಯಾಯ: ಡಿಕೆಶಿ:** ಕೇಂದ್ರ ಸರ್ಕಾರ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದ ಶಿವಕುಮಾರ್, ಕರ್ನಾಟಕ ದೇಶದ ಜಿಡಿಪಿ ಹಾಗೂ ತೆರಿಗೆ ಆದಾಯಕ್ಕೆ ದೊಡ್ಡ ಕೊಡುಗೆ ನೀಡುತ್ತಿದ್ದರೂ ಸೂಕ್ತ ಪಾಲು ಸಿಗುತ್ತಿಲ್ಲ ಎಂದರು.

“ಜನಸಂಖ್ಯೆ ನಿಯಂತ್ರಣದ ಕೇಂದ್ರದ ನೀತಿಯನ್ನು ನಾವು ಅನುಸರಿಸಿದ್ದೇವೆ. ಈಗ ಕ್ಷೇತ್ರ ಮರುವಿಂಗಡಣೆ ಹಾಗೂ ಅನುದಾನ ಹಂಚಿಕೆಯಲ್ಲಿ ಜನಸಂಖ್ಯೆಯನ್ನು ಮಾನದಂಡವಾಗಿಸಲಾಗುತ್ತಿದೆ. ಇದರಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ. ಹಾಲಿ ಕ್ಷೇತ್ರಗಳ ಸಂಖ್ಯೆಯನ್ನು ಉಳಿಸಿಕೊಂಡೇ ಮಹಿಳಾ ಮೀಸಲಾತಿ ಜಾರಿಗೆ ತರಬೇಕು” ಎಂದು ಆಗ್ರಹಿಸಿದರು.

**ಭದ್ರಾ ಮೇಲ್ದಂಡೆ ಯೋಜನೆಗೆ ಹಣ ನೀಡಿಲ್ಲ:** ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 5,400 ಕೋಟಿ ಘೋಷಿಸಿದ್ದರೂ ಇದುವರೆಗೆ ನಯಾಪೈಸೆಯನ್ನೂ ನೀಡಿಲ್ಲ ಎಂದು ಆರೋಪಿಸಿದ ಅವರು, “ಪ್ರಧಾನಿ ಹಾಗೂ ಹಣಕಾಸು ಸಚಿವರು ಘೋಷಿಸಿದ ಮೊತ್ತದ ಆಧಾರದ ಮೇಲೆಯೇ ಹಿಂದಿನ ಸರ್ಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು. ಜನರು ಬಿಜೆಪಿಗೆ ಮತ ಹಾಕಿಲ್ಲ ಎಂಬ ಕಾರಣಕ್ಕೆ ರಾಜ್ಯದೊಂದಿಗೆ ತಾರತಮ್ಯ ಮಾಡುವುದು ನ್ಯಾಯವೇ?” ಎಂದು ಪ್ರಶ್ನಿಸಿದರು.

**ವಾಲ್ಮೀಕಿ ಹಗರಣ: ನಾಗೇಂದ್ರ ಪರ ಡಿಕೆಶಿ:** ಮಾಜಿ ಸಚಿವ ಬಿ. ನಾಗೇಂದ್ರ ಅವರ ಮರುಸಂಪುಟ ಸೇರ್ಪಡೆಯನ್ನು ಸಮರ್ಥಿಸಿಕೊಂಡ ಶಿವಕುಮಾರ್, “ಇಲಾಖೆಯ ಆಂತರಿಕ ತನಿಖೆಯಲ್ಲಿ ಪ್ರಕರಣದಲ್ಲಿ ನಾಗೇಂದ್ರ ಅವರ ಕೈವಾಡ ಇಲ್ಲ ಎಂದು ವರದಿ ಬಂದಿದೆ. ಬಿ–ರಿಪೋರ್ಟ್ ಸಲ್ಲಿಸುವ ಮುನ್ನವೇ ಸಿಬಿಐ ಹಾಗೂ ಇ.ಡಿ. ಮಧ್ಯಪ್ರವೇಶ ಮಾಡಿದ್ದವು. ಅವರ ಮನೆಯಲ್ಲಿ ಒಂದು ರೂಪಾಯಿಯೂ ಪತ್ತೆಯಾಗಿಲ್ಲ” ಎಂದರು.

ಹಗರಣದಲ್ಲಿ ಲೂಟಿಯಾದ ಶೇ.95ರಷ್ಟು ಹಣವನ್ನು ವಾಪಸ್ ಪಡೆಯಲಾಗಿದೆ ಎಂದ ಅವರು, ನಾಗೇಂದ್ರ ಅವರು ಪಕ್ಷದ ಶಿಸ್ತಿನ ಸಿಪಾಯಿಯಾಗಿ ಪಕ್ಷದ ತೀರ್ಮಾನವನ್ನು ಪಾಲಿಸುತ್ತಾರೆ ಎಂದು ಹೇಳಿದರು.

**ಯುವಕರಿಗಾಗಿ 10 ಸಾವಿರ ಸಂಘಗಳ ಗುರಿ:** ಯುವ ಪೀಳಿಗೆ ದೇಶದ ಭವಿಷ್ಯವಾಗಿದ್ದು, ಅವರಿಗೆ ಉದ್ಯೋಗ ನೀಡುವುದರ ಜತೆಗೆ ಉದ್ಯೋಗ ಸೃಷ್ಟಿಸುವ ಅವಕಾಶವನ್ನೂ ಕಲ್ಪಿಸಬೇಕು ಎಂದು ಶಿವಕುಮಾರ್ ಹೇಳಿದರು.

“ಯುವಕರನ್ನು ಡ್ರಗ್ಸ್ ಹಾಗೂ ಇತರ ವ್ಯಸನಗಳಿಂದ ದೂರವಿಟ್ಟು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಬೇಕು. ರಾಜ್ಯಾದ್ಯಂತ 10 ಸಾವಿರ ‘ಭಾರತ ಜೋಡೋ ಯುವ ಸಂಘ’ಗಳನ್ನು ರಚಿಸಲು ಮುಂದಾಗಿದ್ದೇವೆ. ರಾಜಕೀಯ ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಯುವ ನಾಯಕರನ್ನು ಬೆಳೆಸುವುದು ನಮ್ಮ ಉದ್ದೇಶ” ಎಂದರು.

**‘ಎಲ್ಲ ಸಮುದಾಯಗಳನ್ನೂ ಗೌರವಿಸುತ್ತೇವೆ’:** ಅಲ್ಪಸಂಖ್ಯಾತರ ಕಲ್ಯಾಣದ ಕುರಿತು ಮಾತನಾಡಿದ ಅವರು, “ದೇಶದಲ್ಲಿರುವ ಅಲ್ಪಸಂಖ್ಯಾತರೂ ಭಾರತೀಯರೇ. ಅವರನ್ನು ರಕ್ಷಿಸುವುದು ನಮ್ಮ ಕರ್ತವ್ಯ. ನಾವು ಎಲ್ಲ ಸಮುದಾಯಗಳನ್ನೂ ಗೌರವಿಸುತ್ತೇವೆ” ಎಂದರು. ವಂದೇ ಮಾತರಂ ವಿಚಾರದಲ್ಲಿ ಪಕ್ಷದ ಸಿದ್ಧಾಂತ ಹಾಗೂ ತೀರ್ಮಾನಕ್ಕೆ ಬದ್ಧವಾಗಿರುವುದಾಗಿ ತಿಳಿಸಿದರು.

**2028ರಲ್ಲಿ ಮತ್ತೆ ಅಧಿಕಾರ: 2029ರಲ್ಲಿ 20ಕ್ಕೂ ಹೆಚ್ಚು ಲೋಕಸಭಾ ಸ್ಥಾನ:** 2028ರ ವಿಧಾನಸಭಾ ಚುನಾವಣೆಯಲ್ಲಿ ಈಗಿರುವುದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗೆದ್ದು ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಶಿವಕುಮಾರ್, 2029ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದ್ದೇವೆ ಎಂದರು. “ದೇಶದಲ್ಲಿ ರಾಹುಲ್ ಗಾಂಧಿ ಪ್ರಧಾನಿಯಾಗಲಿದ್ದಾರೆ” ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

**‘ಮುಂದಿನ ದಿನಗಳಲ್ಲಿ ಇನ್ನಷ್ಟು ಅಚ್ಚರಿಗಳು’:** ಎಂಎಲ್‌ಸಿ ಚುನಾವಣೆಯ ಬೆಳವಣಿಗೆ ಕುರಿತು ಮಾತನಾಡಿದ ಶಿವಕುಮಾರ್, “ನಾನು ಅಮಿತ್ ಶಾ ಆಗಲು ಬಯಸುವುದಿಲ್ಲ. ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ಪಕ್ಷ ನೀಡುವ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ” ಎಂದರು.

“ಬಿಜೆಪಿ–ಜೆಡಿಎಸ್ ಮೈತ್ರಿಯನ್ನು ನಾನು ಒಡೆಯಲಿಲ್ಲ. 12 ವಿರೋಧ ಪಕ್ಷಗಳ ಶಾಸಕರು ತಮ್ಮ ಆತ್ಮಸಾಕ್ಷಿಯಂತೆ ಮತ ಚಲಾಯಿಸಿದ್ದಾರೆ. ಮುಂದಿನ ದಿನಗಳಲ್ಲಿ ಇಂತಹ ಅಚ್ಚರಿ ಬೆಳವಣಿಗೆಗಳು ನಡೆಯಲಿವೆಯೇ ಎಂಬ ಪ್ರಶ್ನೆಗೆ ಈಗಲೇ ಉತ್ತರಿಸುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಅಚ್ಚರಿಗಳು ಮತ್ತು ಬದಲಾವಣೆಗಳು ಖಂಡಿತ ನಡೆಯಲಿವೆ” ಎಂದು ಶಿವಕುಮಾರ್ ಹೇಳಿದರು.

## ಬೆಂಗಳೂರು ಅಭಿವೃದ್ಧಿಗೆ ಸುರಂಗ ರಸ್ತೆ, ಎಲಿವೇಟೆಡ್ ಕಾರಿಡಾರ್

ಬೆಂಗಳೂರಿನ ಸಂಚಾರ ದಟ್ಟಣೆ ಕುರಿತು ಮಾತನಾಡಿದ ಅವರು, ನಗರದಲ್ಲಿ ಸುಮಾರು 1.35 ಕೋಟಿ ವಾಹನಗಳಿದ್ದು, ಜನಸಂಖ್ಯೆಯೂ 1.40 ಕೋಟಿಯಷ್ಟಿದೆ. “ಈ ಪ್ರಮಾಣದ ವಾಹನ ದಟ್ಟಣೆಯನ್ನು ಈಗಿನ ರಸ್ತೆಗಳು ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಸಮಸ್ಯೆ ಪರಿಹಾರಕ್ಕಾಗಿ 47 ಕಿ.ಮೀ. ಸುರಂಗ ರಸ್ತೆ ಹಾಗೂ 115 ಕಿ.ಮೀ. ಎಲಿವೇಟೆಡ್ ಕಾರಿಡಾರ್ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ” ಎಂದು ಹೇಳಿದರು.

ವೈಟ್‌ಟಾಪಿಂಗ್ ಕಾಮಗಾರಿ ಕುರಿತು, “ನಗರದ ಶೇ.60ರಷ್ಟು ರಸ್ತೆಗಳನ್ನು ವೈಟ್‌ಟಾಪಿಂಗ್ ಮಾಡಲಾಗಿದೆ. ಬೆಂಗಳೂರು ಅಭಿವೃದ್ಧಿಯ ಜತೆಗೆ ಗ್ರಾಮೀಣ ಭಾಗಗಳ ಅಭಿವೃದ್ಧಿಯೂ ನಮ್ಮ ಆದ್ಯತೆ” ಎಂದರು.

**ಮೇಕೆದಾಟು: ‘ನೀರಾವರಿಗೆ ಒಂದು ಹನಿ ನೀರೂ ಬಳಸುವುದಿಲ್ಲ’**

ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಯಾವುದೇ ಅನ್ಯಾಯವಾಗುವುದಿಲ್ಲ ಎಂದು ಶಿವಕುಮಾರ್ ಹೇಳಿದರು.

“ಯೋಜನೆಯಲ್ಲಿ ಸಂಗ್ರಹವಾಗುವ ಶೇ.95ರಷ್ಟು ನೀರು ತಮಿಳುನಾಡಿಗೆ ಹರಿಯಲಿದೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವುದಷ್ಟೇ ಉದ್ದೇಶ. ನೀರಾವರಿಗೆ ಒಂದು ಹನಿ ನೀರನ್ನೂ ಬಳಸುವುದಿಲ್ಲ. ತಮಿಳುನಾಡಿಗೂ ಈ ಯೋಜನೆಯಿಂದ ಪ್ರಯೋಜನವಾಗಲಿದೆ” ಎಂದು ಹೇಳಿದರು.

ತುಂಗಭದ್ರಾ ನೀರಿನ ವಿಚಾರದಲ್ಲಿ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಕೇಂದ್ರ ಸಚಿವ ಸಿ.ಆರ್. ಪಾಟೀಲ್ ಅವರ ನೇತೃತ್ವದಲ್ಲಿ ಚರ್ಚಿಸಿ ಒಮ್ಮತದ ನಿರ್ಧಾರಕ್ಕೆ ಬಂದಿದ್ದಾರೆ. “ಎಲ್ಲ ಸಮಸ್ಯೆಗಳಿಗೂ ನ್ಯಾಯಾಲಯವೇ ಪರಿಹಾರವಲ್ಲ. ಕುಳಿತು ಚರ್ಚಿಸಿದರೆ ಪರಿಹಾರ ಕಂಡುಕೊಳ್ಳಬಹುದು” ಎಂದರು.

## ಈದ್ ಮಿಲಾದ್ ಮೆರವಣಿಗೆಯಲ್ಲಿ ಪ್ಯಾಲೆಸ್ಟೈನ್ ಧ್ವಜ: ಪೊಲೀಸರಿಂದ ವಶ

● ವಿಕ್ರಮ ವಾಹಿನಿ | ಅಂಕೋಲಾ

ಈದ್ ಮಿಲಾದ್ ಮೆರವಣಿಗೆಯ ವೇಳೆ ಪ್ಯಾಲೆಸ್ಟೈನ್ ಧ್ವಜ ಪ್ರದರ್ಶಿಸಿ ಘೋಷಣೆ ಕೂಗಿದ ಘಟನೆ ಅಂಕೋಲಾದಲ್ಲಿ ನಡೆದಿದೆ. ಬೊಬ್ರುವಾಡದ ಜಾಮಿಯಾ ಮಸೀದಿ ಬಳಿಯಿಂದ ಆರಂಭವಾದ ಮೆರವಣಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗುತ್ತಿದ್ದ ವೇಳೆ ಯುವಕರ ಗುಂಪೊಂದು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗುತ್ತ ಸಾಗಿತು.

ಈ ವೇಳೆ ಯುವಕನೊಬ್ಬ ಪ್ಯಾಲೆಸ್ಟೈನ್ ಧ್ವಜ ಹಿಡಿದು ಸಾಗುತ್ತಿದ್ದ. ಮೆರವಣಿಗೆಯಲ್ಲಿ ಪ್ಯಾಲೆಸ್ಟೈನ್ ಹಾಗೂ ಹಮಾಸ್ ಪರ ಘೋಷಣೆಗಳನ್ನು ಕೂಗಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ವಿಷಯ ಗಮನಕ್ಕೆ ಬರುತ್ತಿದ್ದಂತೆ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಧ್ವಜವನ್ನು ವಶಕ್ಕೆ ಪಡೆದರು. ಬಳಿಕ ಮೆರವಣಿಗೆ ಮುಂದುವರಿಯಲು ಪೊಲೀಸರು ಅವಕಾಶ ಮಾಡಿಕೊಟ್ಟರು.

## ಕ್ರಿತಿ ಸನೋನ್ ಜಾಹೀರಾತು ವಿವಾದ: ರಾಹುಲ್‌ಗೆ ಕಂಗನಾ ತಿರುಗೇಟು



● ವಿಕ್ರಮ ವಾಹಿನಿ | ನವದೆಹಲಿ

ನಟಿ ಕ್ರಿತಿ ಸನೋನ್ ಅವರ ಜಾಹೀರಾತಿನಲ್ಲಿನ ಉಡುಗೆ ಕುರಿತ ವಿವಾದ ಇದೀಗ ರಾಜಕೀಯ ವಾಗ್ವಾದಕ್ಕೆ ತಿರುಗಿದೆ. ಮಹಿಳೆಯರು ಏನು ಧರಿಸಬೇಕು, ಎಲ್ಲಿಗೆ ಹೋಗಬೇಕು ಎಂಬುದನ್ನು ಪ್ರಶ್ನಿಸಬಾರದು ಎಂದು ರಾಹುಲ್ ಗಾಂಧಿ ನೀಡಿದ್ದ ಹೇಳಿಕೆಗೆ ಬಿಜೆಪಿ ಸಂಸದೆ ಹಾಗೂ ನಟಿ ಕಂಗನಾ ರಣಾವತ್ ಸಾಮಾಜಿಕ ಜಾಲತಾಣದ ಮೂಲಕ ತಿರುಗೇಟು ನೀಡಿದ್ದಾರೆ.

ಕಂಗನಾ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ, ಮಹಿಳೆಯೊಬ್ಬರಿಗೆ ‘ಪಿತೃಪ್ರಧಾನ ವ್ಯವಸ್ಥೆಯನ್ನು ಧ್ವಂಸಗೊಳಿಸಿ’ ಎಂದು ಹೇಳುತ್ತಿರುವ ಚಿತ್ರವಿದ್ದು, ಅದಕ್ಕೆ ಆಕೆ ‘ಬ್ರೋ, ವೇಟ್! ಮೊದಲು ಭಾರತ್ ಮಾತಾ ಕಿ ಜೈ ಎನ್ನುವುದರಿಂದ ಆರಂಭಿಸೋಣ’ ಎಂದು ಪ್ರತಿಕ್ರಿಯಿಸುವ ರೀತಿಯಲ್ಲಿ ವ್ಯಂಗ್ಯಚಿತ್ರವಿದೆ.

**ಜಾಹೀರಾತಿನಿಂದ ಆರಂಭವಾದ ವಿವಾದ**

ರಕ್ಷಾಬಂಧನ ಹಿನ್ನೆಲೆಯಲ್ಲಿ ಬಿಡುಗಡೆಯಾಗಿದ್ದ ಆಭರಣದ ಜಾಹೀರಾತಿನಲ್ಲಿ ಕ್ರಿತಿ ಸನೋನ್ ಧರಿಸಿದ್ದ ಉಡುಗೆ ಕುರಿತು ಕಂಗನಾ ಸೇರಿದಂತೆ ಹಲವರು ಟೀಕೆ ವ್ಯಕ್ತಪಡಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಕ್ರಿತಿ, “ಮಹಿಳೆಯರು ಏನು ಧರಿಸಬೇಕು ಎಂದು ಹೇಳುವುದನ್ನು ಯಾವಾಗ ನಿಲ್ಲಿಸುತ್ತೀರಿ?” ಎಂದು ಪ್ರಶ್ನಿಸಿದ್ದರು.

ಕ್ರಿತಿ ಅವರ ಹೇಳಿಕೆಗೆ ಬೆಂಬಲ ವ್ಯಕ್ತಪಡಿಸಿದ್ದ ರಾಹುಲ್ ಗಾಂಧಿ, ಮಹಿಳೆ ಏನು ಧರಿಸಬೇಕು, ಎಲ್ಲಿಗೆ ಹೋಗಬೇಕು ಎಂಬುದು ಆಕೆಯ ವೈಯಕ್ತಿಕ ಆಯ್ಕೆ. ಹೆಣ್ಣುಮಕ್ಕಳ ಸ್ವಾತಂತ್ರ್ಯವನ್ನು ಪ್ರಶ್ನಿಸಬಾರದು ಎಂದು ಹೇಳಿದ್ದರು. ವಿವಾದ ತೀವ್ರಗೊಂಡ ಹಿನ್ನೆಲೆಯಲ್ಲಿ ಜಾಹೀರಾತು ಸಂಸ್ಥೆ ಜಾಹೀರಾತನ್ನು ಹಿಂಪಡೆದಿದೆ.

**ಕಾಂಗ್ರೆಸ್ ವಿರುದ್ಧ ಕಂಗನಾ ಪ್ರಶ್ನೆಗಳ ಸುರಿಮಳೆ**

ರಾಹುಲ್ ಗಾಂಧಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಂಗನಾ, ಮಹಿಳಾ ಮೀಸಲಾತಿ ಕಾನೂನಿಗೆ ಕಾಂಗ್ರೆಸ್‌ನ ಹಿಂದಿನ ನಿಲುವು, ತ್ರಿವಳಿ ತಲಾಕ್ ಕುರಿತ ಪಕ್ಷದ ನಿಲುವು ಹಾಗೂ ಕರ್ನಾಟಕದ ಕಾಂಗ್ರೆಸ್ ಸರ್ಕಾರದಲ್ಲಿ ಮಹಿಳಾ ಸಚಿವರಿಗೆ ಪ್ರಾತಿನಿಧ್ಯ ಇಲ್ಲದಿರುವುದನ್ನು ಪ್ರಶ್ನಿಸಿದ್ದಾರೆ.

ಈ ಮೂಲಕ ಕ್ರಿತಿ ಸನೋನ್ ಅವರ ಉಡುಗೆ ಕುರಿತ ವಿವಾದ ಮಹಿಳಾ ಸ್ವಾತಂತ್ರ್ಯ, ರಾಜಕೀಯ ನಿಲುವು ಹಾಗೂ ಪಕ್ಷಗಳ ಮಹಿಳಾ ಪ್ರಾತಿನಿಧ್ಯದ ಚರ್ಚೆಯಾಗಿ ಹೊಸ ತಿರುವು ಪಡೆದಿದೆ.

ಈ ನಡುವೆ, ಕಂಗನಾ ಅವರ ಪ್ರತಿಕ್ರಿಯೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಮಹಿಳೆಯರ ಉಡುಗೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ವಿಚಾರವನ್ನು ರಾಜಕೀಯವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.


ತುಮಕೂರಿನ ಸಿದ್ದಗಂಗಾ ಮಠದ ಪರಮಪೂಜ್ಯ ಶ್ರೀ ಸಿದ್ದಲಿಂಗಸ್ವಾಮಿಗಳು ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಬುಧವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

## ನೂಪುರ ನರ್ತನ: ಯುವ ನರ್ತಕಿಯರ ಭರವಸೆಯ ಗೆಜ್ಜೆಪೂಜೆ

● ವಿಕ್ರಮ ವಾಹಿನಿ | ಬೆಂಗಳೂರು



ಭರತನಾಟ್ಯದಲ್ಲಿ ಗೆಜ್ಜೆಪೂಜೆ ಕಲಾವಿದೆಯ ಕಲಾಯಾತ್ರೆಯ ಮೊದಲ ಸಾರ್ವಜನಿಕ ಹೆಜ್ಜೆ. ಈ ಹಂತದಲ್ಲಿ ಪರಿಪೂರ್ಣತೆಗಿಂತ ಪ್ರತಿಭೆ, ಶಿಸ್ತು, ಅಭ್ಯಾಸ ಹಾಗೂ ಮುಂದಿನ ಬೆಳವಣಿಗೆಯ ಸಾಧ್ಯತೆಗಳು ಮುಖ್ಯವಾಗುತ್ತವೆ. ಈ ದೃಷ್ಟಿಯಿಂದ ನಿರಂತರ ಸ್ಕೂಲ್ ಆಫ್ ಡಾನ್ಸ್ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ಐವರು ಯುವ ನರ್ತಕಿಯರ ಗೆಜ್ಜೆಪೂಜೆ ಪ್ರದರ್ಶನ ಗಮನ ಸೆಳೆಯಿತು.

ಕೃತುಲ್ಯಾ ಸುರೇಶ್, ಪೇರಕಂ ಆದ್ಯ, ಸಿಯಾ ಶಾನುಭಾಗ್, ಪ್ರೇಕ್ಷಾ ಎಲ್. ಹಾಗೂ ಲಾಸ್ಯ ವರ್ಷಿಣಿ ಆಕುರತಿ ಅವರು ತಮ್ಮ ಮೊದಲ ಸಾರ್ವಜನಿಕ ಪ್ರದರ್ಶನವನ್ನು ಆತ್ಮವಿಶ್ವಾಸ ಹಾಗೂ ಶ್ರದ್ಧೆಯಿಂದ ನಿರ್ವಹಿಸಿದರು.

ಐವರು ಒಟ್ಟಾಗಿ ಪ್ರದರ್ಶನ ನೀಡಿದ್ದು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿತು. ಅಚ್ಚುಕಟ್ಟಾದ ಆಯೋಜನೆ ಮತ್ತು ಶಿಸ್ತುಬದ್ಧ ನಿರ್ವಹಣೆಯೂ ಗಮನಾರ್ಹವಾಗಿತ್ತು.

ನಿರಂತರ ಸ್ಕೂಲ್ ಆಫ್ ಡಾನ್ಸ್‌ನ ಸಂಸ್ಥಾಪಕ ದಂಪತಿಗಳಾದ ಸೋಮಶೇಖರ್ ಚೂಡಾನಾಥ್ ಹಾಗೂ ಸೌಮ್ಯ ಸೋಮಶೇಖರ್ ಅವರು ಭರತನಾಟ್ಯ ಮತ್ತು ಕಥಕ್ ಎರಡೂ ನೃತ್ಯಶೈಲಿಗಳಲ್ಲಿ ಪರಿಣತಿ ಹೊಂದಿದ್ದು, ಈ ಪ್ರದರ್ಶನದ ಕೃತಿಗಳನ್ನು ಸಂಯೋಜಿಸಿದ್ದರು. ಶಿಷ್ಯೆಯರ ವಯಸ್ಸು, ಪ್ರತಿಭೆ, ಅನುಭವ ಮತ್ತು ಗ್ರಹಣಶಕ್ತಿಗೆ ಅನುಗುಣವಾಗಿ ಕೃತಿಗಳನ್ನು ಆಯ್ಕೆ ಮಾಡಿರುವುದು ಪ್ರದರ್ಶನದಲ್ಲಿ ಸ್ಪಷ್ಟವಾಗಿ ಗೋಚರಿಸಿತು.

ಒಟ್ಟು ಎಂಟು ಕೃತಿಗಳನ್ನು ಪ್ರದರ್ಶಿಸಲಾಯಿತು. ನಾಟ್ಟ ರಾಗದ ಪುಷ್ಪಾಂಜಲಿ, ರಾಗಮಾಲಿಕೆಯ ತೋಡಯ ಮಂಗಳಂ ಹಾಗೂ ಹಿಂದೋಳ ರಾಗದ ತಿಲ್ಲಾನವನ್ನು ಐವರು ಸಮೂಹವಾಗಿ ಪ್ರಸ್ತುತಪಡಿಸಿದರು.

ಪೇರಕಂ ಆದ್ಯ ಅವರು ಸರಸ್ವತಿ ರಾಗದ ಜತಿಸ್ವರದಲ್ಲಿ ಲಯದ ಮೇಲಿನ ಹಿಡಿತ ಮೆರೆದರೆ, ಪ್ರೇಕ್ಷಾ ಎಲ್. ಅವರು ಪುರಂದರದಾಸರ ‘ಚಂದ್ರಚೂಡ ಶಿವಶಂಕರ’ ದೇವರನಾಮವನ್ನು ಸ್ಪಷ್ಟ ಅಭಿನಯದೊಂದಿಗೆ ಕಟ್ಟಿಕೊಟ್ಟರು.

ಸಿಯಾ ಶಾನುಭಾಗ್ ಅವರು ರಂಜನಿ ಮಾಲಾದಲ್ಲಿ ನಿಬದ್ಧಗೊಂಡ ದೇವಿಸ್ತುತಿಯನ್ನು ಭಕ್ತಿರಸದೊಂದಿಗೆ ನಿರ್ವಹಿಸಿದರು.

ಕೃತುಲ್ಯಾ ಸುರೇಶ್ ಅವರು ಬೃಂದಾವನ ಸಾರಂಗ ರಾಗದ ‘ಕಲಿಯುಗ ವರದನ್’ ಕೃತಿಯಲ್ಲಿ ಸಾತ್ವಿಕ ಭಕ್ತಿಭಾವವನ್ನು ಸಮರ್ಥವಾಗಿ ಅಭಿವ್ಯಕ್ತಿಸಿದರು. ಲಾಸ್ಯ ವರ್ಷಿಣಿ ಆಕುರತಿ ಅವರು ಸಿಂಧುಭೈರವಿ ರಾಗದ ಪುರಂದರದಾಸರ ‘ತಂಬ’ ಕೃತಿಯನ್ನು ತಮ್ಮ ವಯಸ್ಸಿಗೆ ತಕ್ಕ ಮಿತಿಯಲ್ಲಿ ಅರ್ಥಪೂರ್ಣವಾಗಿ ಪ್ರಸ್ತುತಪಡಿಸಿದರು.

ಮೊದಲ ಹೆಜ್ಜೆಯಲ್ಲೇ ಪರಿಪೂರ್ಣತೆಯನ್ನು ನಿರೀಕ್ಷಿಸುವ ಬದಲು, ಮುಂದಿನ ಪಯಣದ ಭರವಸೆಯ ಲಕ್ಷಣಗಳನ್ನು ಗುರುತಿಸುವ ದೃಷ್ಟಿಯಿಂದ ಈ ಗೆಜ್ಜೆಪೂಜೆ ಯಶಸ್ವಿಯಾಯಿತು.

ಗೆಜ್ಜೆಯ ಮೊದಲ ನಾದವೇ ಮುಂದಿನ ರಂಗಪ್ರವೇಶದ ಮುನ್ನುಡಿಯಾಗಿದ್ದು, ಈ ಐವರು ನರ್ತಕಿಯರ ನೂಪುರ ನಾದ ಭವಿಷ್ಯದಲ್ಲಿ ಮತ್ತಷ್ಟು ಪಕ್ವವಾಗಿ ಮೊಳಗಲಿ ಎಂಬ ಆಶಯ ಮೂಡಿಸಿತು.

## ಖೇಲೋ ಇಂಡಿಯಾ: ಇಂದು ವಿದ್ಯಾರ್ಥಿಗಳೊಂದಿಗೆ ಮೋದಿ ಸಂವಾದ

● ವಿಕ್ರಮ ವಾಹಿನಿ | ನವದೆಹಲಿ

2026ರ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಬೆಳಗ್ಗೆ 11 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ **‘ಖೇಲೋ ಇಂಡಿಯಾ ಸಂವಾದ’**ದಲ್ಲಿ ದೇಶದಾದ್ಯಂತದ ಯುವಜನರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ಮೇರಾ ಯುವ ಭಾರತ್ (ಎಂವೈ ಭಾರತ್) ಆಯೋಜಿಸಿರುವ ಈ ಕಾರ್ಯಕ್ರಮವು ಯುವಜನರನ್ನು ಭಾರತದ ಕ್ರೀಡಾ ಪಯಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಉದ್ದೇಶ ಹೊಂದಿದೆ. ಕ್ರೀಡಾ ಕ್ಷೇತ್ರದಲ್ಲಿ ಯುವಕರ ಆಸಕ್ತಿ, ಅವರ ಸಾಧನೆಗಳು ಹಾಗೂ ಭವಿಷ್ಯದ ಆಶಯಗಳನ್ನು ಹಂಚಿಕೊಳ್ಳಲು ಕಾರ್ಯಕ್ರಮ ವೇದಿಕೆ ಕಲ್ಪಿಸಲಿದೆ.

**ಪ್ರತಿ ಜಿಲ್ಲೆಯಿಂದ ವಿದ್ಯಾರ್ಥಿಗಳ ಭಾಗಿ:** ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿ ಜಿಲ್ಲೆಯ ಎರಡು ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಯುವಜನರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನೇರವಾಗಿ ಸಂವಾದ ನಡೆಸುವ ಮೂಲಕ ಕ್ರೀಡೆ ಹಾಗೂ ಯುವಜನರ ಅಭಿವೃದ್ಧಿಗೆ ಸಂಬಂಧಿಸಿದ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ.



**ಕ್ರೀಡೆ, ಫಿಟ್ನೆಸ್‌ಗೆ ಆದ್ಯತೆ:** ಖೇಲೋ ಇಂಡಿಯಾ ಸಂವಾದದಲ್ಲಿ ಕ್ರೀಡೆಯ ಜತೆಗೆ ಯುವ ನಾಯಕತ್ವ, ನಾಗರಿಕ ಜವಾಬ್ದಾರಿ, ಸ್ವಯಂಸೇವೆ, ದೈಹಿಕ ಕ್ಷಮತೆ ಮತ್ತು ರಾಷ್ಟ್ರ ನಿರ್ಮಾಣದಂತಹ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಯುವಜನರು ಕ್ರೀಡೆಯನ್ನು ಜೀವನಶೈಲಿಯ ಭಾಗವನ್ನಾಗಿ ಮಾಡಿಕೊಂಡು ಆರೋಗ್ಯಕರ ಹಾಗೂ ಸಕ್ರಿಯ ಜೀವನ ನಡೆಸುವಂತೆ ಉತ್ತೇಜಿಸುವ ಉದ್ದೇಶವೂ ಕಾರ್ಯಕ್ರಮಕ್ಕಿದೆ.

**ಯುವಶಕ್ತಿಗೆ ಉತ್ತೇಜನ:** ಭಾರತದ ಕ್ರೀಡಾ ಕ್ಷೇತ್ರದ ಬೆಳವಣಿಗೆಯಲ್ಲಿ ಯುವಜನರ ಪಾತ್ರವನ್ನು ಮತ್ತಷ್ಟು ಬಲಪಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ದೇಶದ ಕ್ರೀಡಾ ಪರಿಸರ ವ್ಯವಸ್ಥೆಯಲ್ಲಿನ ಅವಕಾಶಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಜತೆಗೆ, ಅವರ ಪ್ರತಿಭೆ ಮತ್ತು ಆಕಾಂಕ್ಷೆಗಳಿಗೆ ಸೂಕ್ತ ವೇದಿಕೆ ಕಲ್ಪಿಸುವ ಕುರಿತು ಗಮನ ಹರಿಸಲಾಗುವುದು.

ಯುವಜನರನ್ನು ಕೇವಲ ಕ್ರೀಡೆಯಲ್ಲಿ ಮಾತ್ರವಲ್ಲದೆ ಸಾಮಾಜಿಕ ಜವಾಬ್ದಾರಿ ಹಾಗೂ ರಾಷ್ಟ್ರ ನಿರ್ಮಾಣದ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವ ನಿರೀಕ್ಷೆಯಿದೆ. ಕಾರ್ಯಕ್ರಮದ ಮೂಲಕ ದೇಶದ ಯುವ ಸಮುದಾಯದೊಂದಿಗೆ ನೇರ ಸಂಪರ್ಕ ಸಾಧಿಸಿ, ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಅವರ ಕೊಡುಗೆಯನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

# ಗುರು ರಾಘವೇಂದ್ರ ಸ್ವಾಮಿಗಳ 355ನೇ ಆರಾಧನೆಗೆ ಸಿದ್ಧತೆ

● ವಿಕ್ರಮ ವಾಹಿನಿ | ಬೆಂಗಳೂರು

*ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವ ಆ.27ರಿಂದ ಸೆ.2ರವರೆಗೆ ಏಳು ದಿನಗಳ ಕಾಲ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.*

*ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಅನುಗ್ರಹದೊಂದಿಗೆ, ಮಠದ ಹಿರಿಯ ವ್ಯವಸ್ಥಾಪಕ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಮಹೋತ್ಸವ ಆಯೋಜಿಸಲಾಗಿದೆ. ಆ.27ರಂದು ಸಂಜೆ 6.30ಕ್ಕೆ ಮುಳಬಾಗಲು ಶ್ರೀಪಾದರಾಜ ಮಠದ ಶ್ರೀ 1008 ಶ್ರೀ ಸುಜಯನಿಧಿತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯದಲ್ಲಿ ಗೋಪೂಜೆ, ಧ್ವಜಾರೋಹಣ, ಶ್ರೀಲಕ್ಷ್ಮೀಪೂಜೆ, ಧನ–ಧಾನ್ಯ ಪೂಜೆ ಹಾಗೂ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಆರಾಧನೆಯ ಮೂರು ವಿಶೇಷ ದಿನಗಳು: ಆ.29ರಂದು ಪೂರ್ವಾರಾಧನೆ, ಆ.30ರಂದು ಮಧ್ಯಾರಾಧನೆ ಹಾಗೂ ಆ.31ರಂದು ಉತ್ತರಾರಾಧನೆ ನಡೆಯಲಿದೆ. ಈ ಮೂರು ದಿನಗಳಲ್ಲೂ ಬೆಳಗ್ಗೆ 6.30ಕ್ಕೆ ಗುರು ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಫಲ ಪಂಚಾಮೃತ ಅಭಿಷೇಕ, ಅಷ್ಟೋತ್ತರ ಪಾರಾಯಣ, ನೂತನ ವಸ್ತ್ರ ಸಮರ್ಪಣೆ, ನವರತ್ನ ಕವಚ ಹಾಗೂ ವಿಶೇಷ ಪುಷ್ಪಾಲಂಕಾರ ನೆರವೇರಲಿದೆ.*



*ಬೆಳಗ್ಗೆ 7ಕ್ಕೆ ಸೇವಾಕರ್ತರಿಗೆ ಸಂಕಲ್ಪ ಹಾಗೂ ಸಾಮೂಹಿಕ ಪಾದಪೂಜೆ ನಡೆಯಲಿದ್ದು, ಬಳಿಕ ಬೆಳಗ್ಗೆ 11ಕ್ಕೆ ಕನಕಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ಹಾಗೂ 12.30ಕ್ಕೆ ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿದೆ.*

***ಮಹಾರಥೋತ್ಸವ:*** *ಆ.30ರಂದು ಬೆಳಗ್ಗೆ 8.30ಕ್ಕೆ ಜಯನಗರ 5ನೇ ಬಡಾವಣೆಯ ರಾಜಬೀದಿಯಲ್ಲಿ ಮಹಾರಥೋತ್ಸವ ನಡೆಯಲಿದೆ.*



***ಪ್ರತಿದಿನ ಭಜನೆ, ಪ್ರವಚನ:*** *ಏಳು ದಿನಗಳ ಕಾಲ ಪ್ರತಿದಿನ ಸಂಜೆ 5ರಿಂದ 6ರವರೆಗೆ ವಿವಿಧ ಭಜನಾ ಮಂಡಳಿಗಳಿಂದ ಶ್ರೀಹರಿ ಭಜನೆ ನಡೆಯಲಿದೆ. ಸಂಜೆ 6.30ರಿಂದ ಪ್ರವಚನ, ದಾಸವಾಣಿ, ವಾದ್ಯ ಸಂಗೀತ, ದಾಸಲಹರಿ ಹಾಗೂ ಭರತನಾಟ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.ಮಹೋತ್ಸವದ ಹಿನ್ನೆಲೆಯಲ್ಲಿ 55ಕ್ಕೂ ಹೆಚ್ಚು ಬಾಣಸಿಗರಿಂದ ಭಕ್ತರಿಗೆ ವಿಶೇಷ ಪ್ರಸಾದ ಹಾಗೂ ಪಂಚಭಕ್ಷ್ಯ ತಯಾರಿಸಲಾಗುತ್ತಿದೆ. ಮಠದ ಆವರಣ ಹಾಗೂ ರಾಜಬೀದಿಯನ್ನು ವಿಶೇಷ ದೀಪಾಲಂಕಾರದಿಂದ ಸಿಂಗರಿಸಲಾಗುತ್ತಿದೆ.*

***ಭಕ್ತರಿಗೆ ವಿಶೇಷ ವ್ಯವಸ್ಥೆ:*** *ಸಹಸ್ರಾರು ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಜಯನಗರ ಪೊಲೀಸ್ ಸಿಬ್ಬಂದಿಯ ಸಹಕಾರದೊಂದಿಗೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ. ವಯೋವೃದ್ಧರು, ವಿಕಲಚೇತನರು, ಗರ್ಭಿಣಿಯರು, ಸೇವಾಕರ್ತರು ಹಾಗೂ ಭಕ್ತರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹಿರಿಯ ವ್ಯವಸ್ಥಾಪಕ ಆರ್.ಕೆ. ವಾದೀಂದ್ರಾಚಾರ್ಯರು ತಿಳಿಸಿದ್ದಾರೆ.*



*ಆರಾಧನಾ ಮಹೋತ್ಸವದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವ ಭಕ್ತರು ಮಠದ ಮೂಲಕ ಸೇವೆ ಸಲ್ಲಿಸಬಹುದಾಗಿದೆ. ವಿಶೇಷ ದಾನಿಗಳಿಗೆ ಶ್ರೀ ಕ್ಷೇತ್ರ ಮಂತ್ರಾಲಯ ಯಾತ್ರೆಯ ಅವಕಾಶ ಕಲ್ಪಿಸಲಾಗಿದ್ದು, ಮೂಲ ಬೃಂದಾವನದ ದರ್ಶನ ಹಾಗೂ ಶ್ರೀಗಳವರಿಂದ ಫಲಮಂತ್ರಾಕ್ಷತೆ ಸ್ವೀಕರಿಸುವ ವ್ಯವಸ್ಥೆ ಮಾಡಲಾಗಿದೆ.*

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481
ವಿಕ್ರಮ ವಾಹಿನಿ

# ವಿ.ಜಿ. ಸಿದ್ದಾರ್ಥ ಸ್ಮಾರಕ ಕ್ವಿಜ್‌ನಲ್ಲಿ ಉಡುಪಿಯ ತಕ್ಷಕ್ ಶೆಟ್ಟಿ ಪ್ರಥಮ

● ವಿಕ್ರಮ ವಾಹಿನಿ | ಚಿಕ್ಕಮಗಳೂರು



ಐದನೇ ಆವೃತ್ತಿಯ ವಿ ಜಿ ಸಿದ್ದಾರ್ಥ ಸ್ಮಾರಕ ರಸಪ್ರಶ್ನೆ ಸ್ಪರ್ಧೆ ಅಂತಿಮ ಸುತ್ತಿನಲ್ಲಿ ಉಡುಪಿ ಲಿಟಲ್ ರಾಕ್ ಇಂಡಿಯನ್ ಶಾಲೆಯ ತಕ್ಷಕ್ ಶೆಟ್ಟಿ ಅವರು ಪ್ರಥಮ ಸ್ಥಾನ ಪಡೆದು 1 ಲಕ್ಷ ರೂ. ಮೌಲ್ಯದ ಶೈಕ್ಷಣಿಕ ವಿದ್ಯಾರ್ಥಿವೇತನಕ್ಕೆ ಭಾಜನರಾದರು. ಮೂವರು ರನ್ನರ್ ಅಪ್‌ಗಳಿಗೆ ತಲಾ ಐಪ್ಯಾಡ್ ನೀಡಲಾಯಿತು.

ಚಿಕ್ಕಮಗಳೂರಿನ ಅಂಬರ್ ವ್ಯಾಲಿ ರೆಸಿಡೆನ್ಶಿಯಲ್ ಸ್ಕೂಲ್‌ನಲ್ಲಿ ಕಳೆದ ಭಾನುವಾರ (ಆ.23) ರಸಪ್ರಶ್ನೆ ಅಂತಿಮ ಸುತ್ತಿನ ಸ್ಪರ್ಧೆ ಜರುಗಿತು.

ದೇಶದ ವಿವಿಧ ಭಾಗಗಳು ಹಾಗೂ ವಿದೇಶಗಳಿಂದ ಆಗಮಿಸಿದ್ದ ಹತ್ತು ಪ್ರತಿಭಾವಂತ ಯುವ ಸ್ಪರ್ಧಿಗಳು ಅಂತಿಮ ಸುತ್ತಿನಲ್ಲಿ ಭಾಗವಹಿಸಿದ್ದರು. ಕುವೈತ್‌ನ ಇಬ್ಬರು ಸ್ಪರ್ಧಿಗಳೂ ಫಿನಾಲೆಗೆ ಅರ್ಹತೆ ಪಡೆದಿದ್ದರು. ಎವಿಆರ್ ಎಸ್ ಆವರಣದಲ್ಲಿ ನಡೆದ ಸ್ಪರ್ಧೆಯಲ್ಲಿ ಜ್ಞಾನ, ವೇಗದ ಚಿಂತನೆ ಹಾಗೂ ವಿಮರ್ಶಾತ್ಮಕ ಆಲೋಚನಾ ಸಾಮರ್ಥ್ಯದ ಅತ್ಯುತ್ತಮ ಪ್ರದರ್ಶನ ಕಂಡುಬಂದಿತು.

ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ವಿದ್ಯಾರ್ಥಿಗಳು ತಮ್ಮ ಅದ್ಭುತ ನೆನಪಿನ ಶಕ್ತಿ ಹಾಗೂ ತ್ವರಿತವಾಗಿ ಉತ್ತರಿಸುವ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಕ್ವಿಜ್ ಮಾಸ್ಟರ್‌ಗಳು ಪ್ರಶ್ನೆ ಪೂರ್ಣಗೊಳಿಸುವ ಮುನ್ನವೇ ಕೆಲವರು ಉತ್ತರಿಸುವ ಮೂಲಕ ಗಮನ ಸೆಳೆದರು. ರಶ್ಮಿ ಫುರ್ಟಾಡೊ ಹಾಗೂ ಏಷ್ಯಾದ ಪ್ರಮುಖ ಕ್ವಿಜ್ ಮಾಸ್ಟರ್ ಎಂದು ಖ್ಯಾತರಾದ ಗಿರಿ ಪಿಕ್‌ಬ್ರೈನ್ ಕಾರ್ಯಕ್ರಮ ನಿರ್ವಹಿಸಿದರು.

ಉತ್ತಮ ಸಾಧನೆಗೆ ಮುಂದಾಗಿ

ಎವಿಆರ್ ಎಸ್ ಕಾರ್ಯನಿರ್ವಾಹಕ ಟ್ರಸ್ಟಿ ಐಶ್ವರ್ಯಾ ಡಿಕೆಎಸ್ ಹೆಗ್ಡೆ ಅವರು ಮಾತನಾಡಿ, "ಸ್ಪರ್ಧೆಯ ಅರ್ಥ ಕೇವಲ ಗೆಲುವಲ್ಲ. ವಿದ್ಯಾರ್ಥಿಗಳು ತಪ್ಪುಗಳಿಂದ ಕಲಿಯಬೇಕು, ಸೋಲನ್ನು ಒಪ್ಪಿಕೊಳ್ಳಬೇಕು ಹಾಗೂ ಪರಸ್ಪರ ಸಹಕಾರದೊಂದಿಗೆ ಉತ್ತಮ ಸಾಧನೆಗೆ ಮುಂದಾಗಬೇಕು" ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಎಸ್ ಸಿಇ ಮುಖ್ಯ ಕಾರ್ಯನಿರ್ವಾಹಕ ಮತ್ತು ಕಾರ್ಯದರ್ಶಿ ಡಾ. ಜೋಸೆಫ್ ಇಮ್ಯಾನುಯೆಲ್ ಮಾತನಾಡಿ, "ಶಿಕ್ಷಣವು ಕೇವಲ ಅಂಕ ಮತ್ತು ರ್‍ಯಾಂಕ್‌ಗಳಿಗೆ ಸೀಮಿತವಾಗದೆ, ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಪರಿಹಾರ ಹಾಗೂ ಜ್ಞಾನವನ್ನು ಪ್ರಾಯೋಗಿಕವಾಗಿ ಅನ್ವಯಿಸುವ ಸಾಮರ್ಥ್ಯ ಬೆಳೆಸುವಂತಿರಬೇಕು" ಎಂದು ಹೇಳಿದರು.

ದಿವಂಗತ ವಿ.ಜಿ. ಸಿದ್ದಾರ್ಥ ಅವರ ಸ್ಮರಣಾರ್ಥ ಪ್ರತಿ ವರ್ಷ ಆಗಸ್ಟ್ 23ರಂದು ನಡೆಯುವ ಈ ರಸಪ್ರಶ್ನೆ ಸ್ಪರ್ಧೆ, ಯುವಜನರಲ್ಲಿ ಕುತೂಹಲ, ಜ್ಞಾನಾರ್ಜನೆ, ಆರೋಗ್ಯಕರ ಸ್ಪರ್ಧಾ ಮನೋಭಾವ ಮತ್ತು ಕಲಿಕೆಯ ಆಸಕ್ತಿಯನ್ನು ಬೆಳೆಸುವ ವೇದಿಕೆಯಾಗಿದೆ.

# ಬಾಯಲ್ಲಿ 82 ಗ್ರಾಂ ಚಿನ್ನ; ದುಬೈ ಪ್ರಯಾಣಿಕ ಸಿಕ್ಕಿಬಿದ್ದ





● ವಿಕ್ರಮ ವಾಹಿನಿ | ಬೆಂಗಳೂರು

ಅಕ್ರಮವಾಗಿ ಚಿನ್ನ ಸಾಗಿಸಲು ವಿಚಿತ್ರ ಮಾರ್ಗ ಅನುಸರಿಸಿದ್ದ ದುಬೈ ಪ್ರಯಾಣಿಕನೊಬ್ಬ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದಿದ್ದಾನೆ. ಪ್ರಯಾಣಿಕನ ಬಾಯಿಯಲ್ಲಿ 82 ಗ್ರಾಂ ಚಿನ್ನವನ್ನು ಕ್ಯಾಪ್ಸೂಲ್ ರೂಪದಲ್ಲಿ ಇಟ್ಟುಕೊಂಡು ಸಾಗಿಸುತ್ತಿದ್ದ ಪ್ರಕರಣವನ್ನು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಅಖಖಈ) ಸಿಬ್ಬಂದಿ ಪತ್ತೆಹಚ್ಚಿದ್ದಾರೆ.

ದುಬೈನಿಂದ ಬೆಂಗಳೂರಿಗೆ ಬಂದಿದ್ದ ಮಹಮ್ಮದ್ ಸಿರಾಜ್ ಬಳಿಕ ಗಾಜಿಯಾಬಾದ್‌ಗೆ ತೆರಳಲು ಸಿದ್ಧನಾಗಿದ್ದ. ಈ ವೇಳೆ ಆತನ ವರ್ತನೆ ಬಗ್ಗೆ ಅನುಮಾನಗೊಂಡ ಅಖಖಈ ಸಿಬ್ಬಂದಿ ಪ್ರಯಾಣಿಕನನ್ನು ತಪಾಸಣೆ ನಡೆಸಿದರು. ಆರಂಭಿಕ ಪರಿಶೀಲನೆಯಲ್ಲಿ ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗಿರಲಿಲ್ಲ.

ಬಳಿಕ ಹೆಚ್ಚಿನ ಪರಿಶೀಲನೆ ನಡೆಸಿದಾಗ ಆತನ ಬಾಯಿಯಲ್ಲಿ ಎರಡು ಚಿನ್ನದ ಕ್ಯಾಪ್ಸೂಲ್‌ಗಳು ಪತ್ತೆಯಾಗಿವೆ. ಅವುಗಳಲ್ಲಿ ಒಟ್ಟು 82 ಗ್ರಾಂ ಚಿನ್ನವಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ತಪಾಸಣೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಚಿನ್ನವನ್ನು ಕ್ಯಾಪ್ಸೂಲ್‌ಗಳ ರೂಪದಲ್ಲಿ ಬಾಯಿಯಲ್ಲಿ ಅಡಗಿಸಿಕೊಂಡಿದ್ದ ಎನ್ನಲಾಗಿದೆ.

ಚಿನ್ನ ಪತ್ತೆಯಾದ ಬಳಿಕ ಸಿರಾಜ್‌ನನ್ನು ಹೆಚ್ಚಿನ ತನಿಖೆಗಾಗಿ ಕೆಐಎ ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಚಿನ್ನದ ಮೂಲ, ಅದನ್ನು ಯಾರಿಗೆ ತಲುಪಿಸಬೇಕಿತ್ತು ಹಾಗೂ ಅಕ್ರಮ ಸಾಗಣೆಯ ಹಿಂದೆ ಯಾರಾದರೂ ಇದ್ದಾರೆಯೇ ಎಂಬ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# 'ಟಾಕ್ಸಿಕ್'ಗೆ ಭರ್ಜರಿ ಓಪನಿಂಗ್!

● ವಿಕ್ರಮ ವಾಹಿನಿ | ಬೆಂಗಳೂರು

ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹುನಿರೀಕ್ಷಿತ 'ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್–ಅಪ್ಸ್' ಸಿನಿಮಾ ವಿಶ್ವಾದ್ಯಂತ ಭರ್ಜರಿ ಓಪನಿಂಗ್ ಪಡೆದುಕೊಂಡಿದೆ. ನಾಲ್ಕು ವರ್ಷಗಳ ಬಳಿಕ ಯಶ್ ಅವರನ್ನು ಬೆಳ್ಳಿತೆರೆಯಲ್ಲಿ ಕಂಡ ಅಭಿಮಾನಿಗಳು ಚಿತ್ರಮಂದಿರಗಳ ಮುಂದೆ ಸಂಭ್ರಮಿಸಿದ್ದು, ಹಲವೆಡೆ ಹೌಸ್‌ಫುಲ್ ಪ್ರದರ್ಶನ ಕಂಡುಬಂದಿದೆ.

ಚಿತ್ರವು ವಿಶ್ವಾದ್ಯಂತ 6 ಭಾಷೆಗಳಲ್ಲಿ 12 ಸಾವಿರಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ಬಿಡುಗಡೆಯಾಗಿದೆ. ಭಾರತದಲ್ಲಿ 5,500ಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ಹಾಗೂ ಕರ್ನಾಟಕದಲ್ಲಿ 500ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಂಡಿದೆ.

ಬೆಂಗಳೂರಿನ ಸಂತೋಷ್ ಚಿತ್ರಮಂದಿರದಲ್ಲಿ ಮೊದಲ ದಿನದ ಐದು ಪ್ರದರ್ಶನಗಳ ಟಿಕೆಟ್‌ಗಳು ಸಂಪೂರ್ಣ ಸೋಲ್ಡ್‌ಔಟ್ ಆಗಿವೆ. ಹಲವು ಚಿತ್ರಮಂದಿರಗಳ ಎದುರು ಅಭಿಮಾನಿಗಳು ಯಶ್ ಅವರ ಕಟೌಟ್‌ಗಳಿಗೆ ಹಾಲಿನ ಅಭಿಷೇಕ ಮಾಡಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ಬೆಂಗಳೂರು ನಗರದ 34 ಪ್ರಮುಖ ಕೇಂದ್ರಗಳಲ್ಲಿ ಹೌಸ್‌ಫುಲ್ ಪ್ರದರ್ಶನ ಕಂಡುಬಂದಿದೆ ಎನ್ನಲಾಗಿದೆ.

ಮಲ್ಟಿಪ್ಲೆಕ್ಸ್‌ಗಳಲ್ಲೂ ಉತ್ತಮ ಪ್ರೇಕ್ಷಕರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕನ್ನಡ ಆವೃತ್ತಿಗೆ ವಿಶೇಷ ಬೇಡಿಕೆ ಕಂಡುಬಂದಿದೆ. ಸಿನಿಮಾ ವೀಕ್ಷಿಸಿದ ಪ್ರೇಕ್ಷಕರು ಚಿತ್ರತಂಡದ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಗಳಿಕೆಯಲ್ಲೂ ದಾಖಲೆ:

ಮೊದಲ ದಿನ ಬೆಂಗಳೂರಿನಲ್ಲಿ ಸುಮಾರು 22 ಕೋಟಿ ಗಳಿಸಿದ್ದು, ದೇಶ–ವಿದೇಶಗಳ ಒಟ್ಟಾರೆ ಗಳಿಕೆ 100 ಕೋಟಿಗೂ ಅಧಿಕವಾಗಿದೆ ಎಂದು ವರದಿಯಾಗಿದೆ. ಮುಂದಿನ ದಿನಗಳಲ್ಲಿ ಚಿತ್ರಕ್ಕೆ ಇನ್ನಷ್ಟು ಉತ್ತಮ ಪ್ರತಿಕ್ರಿಯೆ ದೊರೆಯುವ ನಿರೀಕ್ಷೆಯಿದೆ.

# ಕಾಂಗ್ರೆಸ್ ಮದ ಇಳಿಸುವ ಶಕ್ತಿ ಬಿಜೆಪಿಗೆ ಇದೆ: ವಿಜಯೇಂದ್ರ ಎಚ್ಚರಿಕೆ

● ವಿಕ್ರಮ ವಾಹಿನಿ | ಬೆಂಗಳೂರು



**ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಚಿವ ನಾಗೇಂದ್ರ ವಿರುದ್ಧ ವಾಗ್ದಾಳಿ ನಡೆಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ತನಿಖೆಯಲ್ಲಿ ಅವರು ನಿರಪರಾಧಿ ಎಂದು ಸಾಬೀತಾದರೆ ಅವರನ್ನು ಮುಖ್ಯಮಂತ್ರಿಯನ್ನಾಗಿಸಲಿ ಎಂದು ಸವಾಲು ಹಾಕಿದರು. ನಾಗೇಂದ್ರ ರಾಜೀನಾಮೆ ನೀಡುವವರೆಗೆ ಹೋರಾಟ ಮುಂದುವರಿಸುವುದಾಗಿ ಘೋಷಿಸಿದ ಅವರು, ಹಗರಣದ ಹಿಂದೆ ದೊಡ್ಡ ಕುಳಗಳಿದ್ದು, ಅವರನ್ನು ಬಯಲಿಗೆಳೆಯುವುದಾಗಿ ಹೇಳಿದರು.**

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಲೂಟಿ ಮಾಡಿದ ಹಗರಣದ ಪ್ರಮುಖ ಆರೋಪಿ– ಸಚಿವ ನಾಗೇಂದ್ರ ಅವರು ತನಿಖೆಯ ಬಳಿಕ ನಿರಪರಾಧಿ ಎಂದು ಸಾಬೀತಾದರೆ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿಕೊಳ್ಳಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸವಾಲು ಹಾಕಿದ್ದಾರೆ.

ಮಲ್ಲೇಶ್ವರದ ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಶ್ನೆಗೆ ಉತ್ತರಿಸಿದರು. ಇ.ಡಿ. ಚಾರ್ಜ್‌ಶೀಟಿನಲ್ಲೂ ಅವರ ಹೆಸರು ಉಲ್ಲೇಖವಾಗಿದೆ. ಶಿವಮೊಗ್ಗದಲ್ಲಿ ಪ್ರಾಮಾಣಿಕ ಅಧಿಕಾರಿ, ಬೋವಿ ಸಮಾಜದ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಡೆತ್ ನೋಟಿನಲ್ಲೂ ಅಂದಿನ ಸಚಿವ ನಾಗೇಂದ್ರರ ಮೌಖಿಕ ಆದೇಶದ ಮೇರೆಗೆ ಹಣವನ್ನು ತೆಲಂಗಾಣ ರಾಜ್ಯಕ್ಕೆ ವರ್ಗಾಯಿಸಿದ್ದಾಗಿ ತಿಳಿಸಿದ್ದರು ಎಂದು ಗಮನ ಸೆಳೆದರು.

**ಬಿಜೆಪಿ ಎತ್ತಿದ ಪ್ರಶ್ನೆ ಗಂಭೀರವಾಗಿದೆ...**

ಬಿಜೆಪಿ ಎತ್ತಿದ ಪ್ರಶ್ನೆ ಗಂಭೀರವಾಗಿದೆ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಕಾಂಗ್ರೆಸ್ಸಿನವರು ಕೊಳ್ಳೆ ಹೊಡೆದಿದ್ದಾರೆ. ಯಾವುದೇ ಕಾರಣಕ್ಕೂ ಇಂಥ ಭ್ರಷ್ಟರನ್ನು ಮುಂದುವರೆಸಬಾರದು ಎಂದು ಆಗ್ರಹಿಸಿದರು. ಸಚಿವ ಸ್ಥಾನದಿಂದ ತಕ್ಷಣ ಅವರನ್ನು ಕೈಬಿಡಿ ಎಂದು ಒತ್ತಾಯಿಸಿದರು.

ಅಧಿವೇಶನ ಆರಂಭಕ್ಕೂ ಮೊದಲೇ ಇದನ್ನು ಹೇಳಿದ್ದೇವೆ. ಉತ್ತರ ಕರ್ನಾಟಕದ ಸಮಸ್ಯೆಗಳು, ಬರಗಾಲ, ನೀರಾವರಿ ಯೋಜನೆಗಳು, ಕೆಪಿಎಸ್ಸಿ ಹಗರಣದ ಕುರಿತು ಅಧಿವೇಶನದಲ್ಲಿ ಚರ್ಚೆ ಆಗಬೇಕಿದೆ. ನಾಗೇಂದ್ರರ ರಾಜೀನಾಮೆ ಪಡೆಯಿರಿ ಎಂದು ಒತ್ತಾಯಿಸಿದರೆ ಅವರು ಭಂಡತನದಿಂದ ಮೆರೆಯುತ್ತಿದ್ದಾರೆ. ಅಧಿಕಾರದ ಮದದಿಂದ ಕಾಂಗ್ರೆಸ್ ಸರಕಾರ ನಡೆದುಕೊಳ್ಳುತ್ತಿದೆ. ಈ ಮದವನ್ನು ಇಳಿಸುವ ಶಕ್ತಿ ಬಿಜೆಪಿಗೆ ಇದೆ ಎಂದು ಎಚ್ಚರಿಸಿದರು.

**ಹೋರಾಟವನ್ನು ಹಗುರವಾಗಿ ತೆಗೆದುಕೊಳ್ಳದಿರಿ..**

ನಮ್ಮ ಹೋರಾಟವನ್ನು ಹಗುರವಾಗಿ ತೆಗೆದುಕೊಳ್ಳದಿರಿ. ಸದನದಲ್ಲಿ ಹೋರಾಟ ಮಾಡುತ್ತಿದ್ದರೆ ನಮಗೆ ಗೂಂಡಾಗಳೆಂದು ಹೇಳಿದ್ದಾರೆ. ದಲಿತರ ಪರವಾಗಿ ಧ್ವನಿ ಎತ್ತಿದ ಬಿಜೆಪಿ– ಜೆಡಿಎಸ್‌ನವರನ್ನು ಗೂಂಡಾಗಳೆಂದು ಹೇಳುತ್ತೀರಾ ಎಂದು ಪ್ರಶ್ನಿಸಿದರು. 187 ಕೋಟಿ ಹಣ ಲೂಟಿ ಆಗಿದೆ. ದಲಿತರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಆ ಹಣ ವಾಪಸ್ ಬರಬೇಕು.

**ಸಚಿವ ನಾಗೇಂದ್ರ ಬಹಳ ಸಣ್ಣ ಮೀನು ಮಾತ್ರ..**

ಸಚಿವ ನಾಗೇಂದ್ರ ಬಹಳ ಸಣ್ಣ ಮೀನು ಮಾತ್ರ. ಬಹಳ ದೊಡ್ಡ ಮೀನುಗಳು, ತಿಮಿಂಗಿಲಗಳು ಇದರ ಹಿಂದಿವೆ. ಇವರೆಲ್ಲರನ್ನೂ ಹೇಗೆ ಬೀದಿಗೆ ತರಬೇಕು? ಹೇಗೆ ಹೋರಾಟ ಮಾಡಬೇಕೆಂಬ ನಿಟ್ಟಿನಲ್ಲಿ ಬಿಜೆಪಿ ಸಿದ್ಧವಾಗಿದೆ. ಧ್ವನಿ ಇಲ್ಲದ ದಲಿತರ ಪರವಾಗಿ ಎಲ್ಲಿಯವರೆಗೂ ಅಗತ್ಯವೋ ಅಲ್ಲಿನವರೆಗೆ ಹೋರಾಟ ಮಾಡಲಿದ್ದೇವೆ. ಆ ಸಮುದಾಯಕ್ಕೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಬಿಜೆಪಿ ಕಟಿಬದ್ಧವಾಗಿದೆ ಎಂದು ಹೇಳಿದರು. ಬಿಜೆಪಿ, ಸತ್ಯ ಬಿಚ್ಚಿಡುವ ಕೆಲಸ ಮಾಡಲಿದೆ ಎಂದರು.

**ವಿಧಾನಪರಿಷತ್ ಸ್ಥಾನಗಳ ಗೆಲುವಿಗೆ ಕಾರ್ಯತಂತ್ರ..**

ನಮ್ಮೆಲ್ಲ ಶಾಸಕರ ವಿಶೇಷ ಸಭೆ ನಡೆಸಿ ಅಕ್ಟೋಬರ್–ನವೆಂಬರ್‌ನಲ್ಲಿ ನಡೆಯುವ ಆಗ್ನೇಯ ಪದವೀಧರರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ ಮತ್ತು ಈಶಾನ್ಯ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಗೆಲುವಿನ ಕುರಿತು ಚರ್ಚಿಸಿದ್ದೇವೆ. ಈ ಮೂರೂ ಕಡೆಯಲ್ಲಿ ಈಗ ನಮ್ಮದೇ ವಿಧಾನಪರಿಷತ್ ಸದಸ್ಯರು ಇದ್ದಾರೆ ಎಂದು ತಿಳಿಸಿದರು. ಯಾವ ರೀತಿ ರಣತಂತ್ರ ರೂಪಿಸಬೇಕು, ಚುನಾವಣೆ ಗೆಲ್ಲಲು ಅಭ್ಯರ್ಥಿ ಮತ್ತು ಸಂಘಟನೆಯನ್ನು ಜೋಡಿಸುವುದು– ಇವೆಲ್ಲ ವಿಚಾರ ಇಟ್ಟುಕೊಂಡು ಸಭೆ ನಡೆಸಲಾಗಿದೆ ಎಂದು ವಿವರಿಸಿದರು.

# ಕಸ್ತೂರಿ ರಂಗನ್ ವರದಿಗೆ ರಾಜ್ಯದ ವಿರೋಧ; ವಿಶೇಷ ಅಧಿವೇಶನ

● ವಿಕ್ರಮ ವಾಹಿನಿ | ಬೆಂಗಳೂರು

ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಪ್ರದೇಶ (ಇಎಸ್‌ಎ) ಕುರಿತು ಕೇಂದ್ರ ಸರ್ಕಾರ ಹೊರಡಿಸಿರುವ ಹೊಸ ಕರಡು ಅಧಿಸೂಚನೆ ರಾಜ್ಯದಲ್ಲಿ ಮತ್ತೆ ಆತಂಕಕ್ಕೆ ಕಾರಣವಾಗಿದೆ. ಕರಡು ಅಧಿಸೂಚನೆಯಿಂದ ರೈತರು ಹಾಗೂ ಪಶ್ಚಿಮ ಘಟ್ಟ ಪ್ರದೇಶದ ಜನಜೀವನದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಕರಡು ಪ್ರಸ್ತಾವನೆಯಲ್ಲಿ ರಾಜ್ಯದ ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಹಾಸನ, ಶಿವಮೊಗ್ಗ, ಉಡುಪಿ, ಬೆಳಗಾವಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಸೇರಿದಂತೆ 39 ತಾಲೂಕುಗಳ 1,449 ಗ್ರಾಮಗಳ 20,668 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲಾಗಿದೆ.

ಈ ಪ್ರದೇಶಗಳಲ್ಲಿ ವಿವಿಧ ಚಟುವಟಿಕೆಗಳ ಮೇಲೆ ನಿರ್ಬಂಧಗಳು ಜಾರಿಯಾಗುವ ಸಾಧ್ಯತೆ ಇರುವುದರಿಂದ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಕರ್ನಾಟಕಕ್ಕೆ ಅನ್ವಯಿಸಿರುವ ನಿಯಮಗಳ ಕುರಿತು ಪರಿಶೀಲನೆ ನಡೆಸಿ, ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವುದಾಗಿ ಅವರು ಹೇಳಿದ್ದಾರೆ.

ಇದೇ ವೇಳೆ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಜಿಬಿಎ ಚುನಾವಣೆಗೆ ಮುಂದಾಗುವುದಾಗಿ ಸರ್ಕಾರ ತಿಳಿಸಿದೆ. ಜನರ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಲು 'ಪ್ರಜಾಸೇವೆ' ಎಂಬ ಹೊಸ ಇಲಾಖೆ ಆರಂಭಿಸುವ ಉದ್ದೇಶವೂ ಇದೆ. ಪ್ರತಿ ತಿಂಗಳ ಮೊದಲ ಶನಿವಾರ ಇಬ್ಬರು ಸಚಿವರು ಪ್ರತಿ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

# ರಷ್ಯಾ–ಚೀನಾ ಅನಿಲ ಸಂಕೀರ್ಣದಲ್ಲಿ ಭಾರಿ ಸ್ಫೋಟ; 7 ಮಂದಿ ಸಾವು

● ವಿಕ್ರಮ ವಾಹಿನಿ | ಮಾಸ್ಕೋ

ರಷ್ಯಾದ ದೂರದ ಪೂರ್ವದಲ್ಲಿರುವ ಅಮುರ್ ಗ್ಯಾಸ್ ಕೆಮಿಕಲ್ ಕಾಂಪ್ಲೆಕ್ಸ್‌ನಲ್ಲಿ ಮಂಗಳವಾರ ಭಾರಿ ಬೆಂಕಿ ಹಾಗೂ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಆರು ಚೀನೀ ಪ್ರಜೆಗಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಒಂಬತ್ತು ಮಂದಿ ನಾಪತ್ತೆಯಾಗಿದ್ದು, 36 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಒಟ್ಟು 152 ಮಂದಿಗೆ ಗಾಯಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಫೋಟ ಸಂಭವಿಸಿದ ಸಂದರ್ಭದಲ್ಲಿ ಸ್ಥಾವರವು ಇನ್ನೂ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿರಲಿಲ್ಲ. ಅಮುರ್ ಗ್ಯಾಸ್ ಕೆಮಿಕಲ್ ಕಾಂಪ್ಲೆಕ್ಸ್ ಅನ್ನು ರಷ್ಯಾದ ಪೆಟ್ರೋಕೆಮಿಕಲ್ ಕಂಪನಿ ಸಿಬರ್ ಮತ್ತು ಚೀನಾದ ಸರ್ಕಾರಿ ಸ್ವಾಮ್ಯದ ತೈಲ–ಅನಿಲ ಸಂಸ್ಥೆ ಸಿನೊಪೆಕ್ ಜಂಟಿಯಾಗಿ ನಿರ್ಮಿಸುತ್ತಿವೆ. ರಷ್ಯಾದ ಅಮುರ್ ಪ್ರದೇಶದ ಸ್ವೊಬೊಡ್ನಿ ಪಟ್ಟಣದ ಸಮೀಪ ಈ ಬೃಹತ್ ಸಂಕೀರ್ಣ ನಿರ್ಮಾಣವಾಗುತ್ತಿದೆ.

ಯೋಜನೆಯ ನಿರ್ಮಾಣ ಕಾಮಗಾರಿಯಲ್ಲಿ ಸುಮಾರು 30,000 ಕಾರ್ಮಿಕರು ತೊಡಗಿಸಿಕೊಂಡಿದ್ದರು. ಸುಮಾರು 10 ಬಿಲಿಯನ್ ಡಾಲರ್ ಮೌಲ್ಯದ ಈ ಯೋಜನೆಯು ವಿಶ್ವದ ಪ್ರಮುಖ ಪಾಲಿಥಿಲೀನ್ ಮತ್ತು ಪಾಲಿಪ್ರೊಪಿಲೀನ್ ಉತ್ಪಾದನಾ ಘಟಕಗಳಲ್ಲಿ ಒಂದಾಗುವ ಉದ್ದೇಶ ಹೊಂದಿದೆ.

# ನಾಗೇಂದ್ರ ಸದ್ಯಕ್ಕೆ ರಾಜೀನಾಮೆ ಇಲ್ಲ: ಡಿ.ಕೆ. ಶಿವಕುಮಾರ್

● ವಿಕ್ರಮ ವಾಹಿನಿ | ಬೆಂಗಳೂರು

ಮಾಜಿ ಸಚಿವ ಬಿ. ನಾಗೇಂದ್ರ ಅವರು ಪಕ್ಷದ ಶಿಸ್ತಿನ ಸಿಪಾಯಿ. ಅವರ ನಾಯಕತ್ವದ ಮೇಲೆ ಕಾಂಗ್ರೆಸ್‌ಗೆ ನಂಬಿಕೆಯಿದ್ದು, ಸದ್ಯಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ, ನೀರಾವರಿ, ರೈತರ ಸಮಸ್ಯೆಗಳು, ಗ್ಯಾರಂಟಿ ಯೋಜನೆಗಳು, ಎಸ್‌ಐಆರ್ ಹಾಗೂ ಕಸ್ತೂರಿ ರಂಗನ್ ವರದಿ ಸೇರಿದಂತೆ ಹಲವು ವಿಷಯಗಳ ಕುರಿತು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ ಎಂದರು.

**102 ತಾಲೂಕುಗಳಲ್ಲಿ ಬರ:** ರಾಜ್ಯದ 102 ತಾಲೂಕುಗಳಲ್ಲಿ ತೀವ್ರ ಬರ ಪರಿಸ್ಥಿತಿ ಇದೆ. ಕಂದಾಯ ಇಲಾಖೆ ನೀಡುವ ವರದಿ ಆಧರಿಸಿ ಬರ ಘೋಷಣೆ ಮಾಡಲಾಗುವುದು. ಬಳಿಕ ಕೇಂದ್ರ ಸರ್ಕಾರದ ಬಳಿ ತೆರಳಿ ಅಗತ್ಯ ಪರಿಹಾರ ಹಾಗೂ ನೆರವು ಕೋರುವುದಾಗಿ ಮುಖ್ಯಮಂತ್ರಿ ತಿಳಿಸಿದರು.

**ಜನರ ಬಳಿಗೆ ಸಚಿವರು:** ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸಲು 'ಪ್ರಜಾಸೇವೆ' ಎಂಬ ಹೊಸ ಇಲಾಖೆ ಆರಂಭಿಸುವ ಚಿಂತನೆ ಇದೆ. ಪ್ರತಿ ತಿಂಗಳ ಮೊದಲ ಶನಿವಾರ ಇಬ್ಬರು ಸಚಿವರು ಪ್ರತಿ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಜನರ ಅಹವಾಲುಗಳನ್ನು ಆಲಿಸಲಿದ್ದಾರೆ. ಬಳಿಕ ಶಾಸಕರು ಪಂಚಾಯಿತಿ ಮಟ್ಟದಲ್ಲೂ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದು ಸೂಚಿಸಲಾಗಿದೆ.

**ಮತದಾರರ ಪಟ್ಟಿ ಪರಿಷ್ಕರಣೆ:** ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಒಂದು ಕೋಟಿಗೂ ಹೆಚ್ಚು ಹೆಸರುಗಳು ಹೊರಗುಳಿದಿರುವ ಕುರಿತು ಗಮನ ಹರಿಸಲಾಗಿದೆ. ಅರ್ಹರಿಗೆ ಜಾತಿ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಒದಗಿಸಲು ಸರ್ಕಾರ ನೆರವಾಗಲಿದೆ.

ಪ್ರತಿ ಬೂತ್‌ನಲ್ಲಿ ಮತದಾರರ ಪಟ್ಟಿಯನ್ನು ಪರಿಶೀಲಿಸಿ ಅಂತಿಮಗೊಳಿಸಲು ಸೂಚಿಸಲಾಗಿದೆ. 45 ಲಕ್ಷಕ್ಕೂ ಹೆಚ್ಚು ಮಂದಿಗೆ ನೋಟಿಸ್ ನೀಡಲಾಗುತ್ತಿದೆ ಎಂದು ಸಿಎಂ ಹೇಳಿದರು.

**ಯುವಕರಿಗಾಗಿ 'ನೋ ಟು ಡ್ರಗ್ಸ್':** ಯುವಕರನ್ನು ಮಾದಕ ವ್ಯಸನದಿಂದ ದೂರವಿಟ್ಟು ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳತ್ತ ಸೆಳೆಯಲು 'ನೋ ಟು ಡ್ರಗ್ಸ್, ಎಸ್ ಟು ಸ್ಪೋರ್ಟ್ಸ್' ಕಾರ್ಯಕ್ರಮ ರೂಪಿಸಲಾಗುತ್ತಿದೆ. 16ರಿಂದ 35 ವರ್ಷದೊಳಗಿನ ಯುವಕರನ್ನು ಒಳಗೊಂಡ 'ಭಾರತ್ ಜೋಡೋ ಯುವ ಸಂಘ'ಗಳನ್ನು ಪಂಚಾಯಿತಿ ಮಟ್ಟದಲ್ಲಿ ರಚಿಸಲಾಗುವುದು ಎಂದರು.

**ಕಸ್ತೂರಿ ರಂಗನ್ ವರದಿಗೆ ವಿರೋಧ:** ಕಸ್ತೂರಿ ರಂಗನ್ ವರದಿ ಕುರಿತ ಕೇಂದ್ರದ ಕರಡು ಅಧಿಸೂಚನೆಯಲ್ಲಿ ಕಠಿಣ ನಿರ್ಬಂಧಗಳಿವೆ. ಕರ್ನಾಟಕದ ರೈತರ ಹಿತಾಸಕ್ತಿಗೆ ಧಕ್ಕೆಯಾಗುವ ಯಾವುದೇ ಕ್ರಮವನ್ನು ಸರ್ಕಾರ ಒಪ್ಪುವುದಿಲ್ಲ ಎಂದು ಶಿವಕುಮಾರ್ ಹೇಳಿದರು.

ಮುಂದಿನ ಸಚಿವ ಸಂಪುಟ ಸಭೆಯಲ್ಲಿ ವಿರೋಧ ನಿರ್ಣಯ ಕೈಗೊಳ್ಳಲಾಗುವುದು. ಅಗತ್ಯವಿದ್ದರೆ ವಿಶೇಷ ಅಧಿವೇಶನ ನಡೆಸುವ ಬಗ್ಗೆಯೂ ತೀರ್ಮಾನಿಸಲಾಗುವುದು ಎಂದರು.

**ಲಾಲ್‌ಬಾಗ್ ಮಾದರಿಯಲ್ಲಿ 6 ಹೊಸ ಪಾರ್ಕ್**

ಬೆಂಗಳೂರಿನಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ 6 ಹೊಸ ಪಾರ್ಕ್‌ಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ. ತುರಹಳ್ಳಿ ಫಾರೆಸ್ಟ್ ಸೇರಿದಂತೆ ಸುಮಾರು 5 ಸಾವಿರ ಎಕರೆ ಪ್ರದೇಶದಲ್ಲಿ ಹಸಿರು ಪ್ರದೇಶಗಳ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ.

ಪಾರ್ಕ್‌ಗಳ ಜಾಗವನ್ನು ಖಾಸಗಿ ಬಳಕೆಗೆ ನೀಡುವುದಿಲ್ಲ ಹಾಗೂ ಯಾವುದೇ ಕಟ್ಟಡ ನಿರ್ಮಾಣಕ್ಕೂ ಅವಕಾಶವಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು. ರಸ್ತೆ ಅಗಲೀಕರಣದಂತಹ ಅಗತ್ಯ ಕಾಮಗಾರಿಗಳನ್ನು ಮಾತ್ರ ಕಾನೂನಿನ ಚೌಕಟ್ಟಿನಲ್ಲಿ ಕೈಗೊಳ್ಳಲಾಗುವುದು ಎಂದರು.

# ಬಿಜೆಪಿ, ಕಾಂಗ್ರೆಸ್‌ನ 500ಕ್ಕೂ ಹೆಚ್ಚು ಮುಖಂಡರು ಜೆಡಿಎಸ್‌ಗೆ ಸೇರ್ಪಡೆ

● ವಿಕ್ರಮ ವಾಹಿನಿ | ಬೆಂಗಳೂರು



**ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ, ಮೂಡಿಗೆರೆ ಹಾಗೂ ಚಿಕ್ಕಮಗಳೂರು ತಾಲೂಕಿನ 500ಕ್ಕೂ ಹೆಚ್ಚು ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಶ್ರೀ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆ**

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಬಲ ತುಂಬುವ ಬೆಳವಣಿಗೆ ನಡೆದಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿಯ 500ಕ್ಕೂ ಹೆಚ್ಚು ಮುಖಂಡರು ಮತ್ತು ಕಾರ್ಯಕರ್ತರು ಜೆಡಿಎಸ್‌ಗೆ ಸೇರ್ಪಡೆಯಾದರು.

ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್. ಎಲ್. ಭೋಜೇಗೌಡ ಅವರ ನೇತೃತ್ವದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಪಕ್ಷ ಸೇರಿದರು.

ಡಿ.ಜೆ. ಸುರೇಶ್, ಡಿ.ಬಿ. ಅಶೋಕ್ ಗೌಡ, ಬಿ.ಎಸ್. ಅಜಿತ್ ಗೌಡ, ಜಿ.ಯು. ಚಂದ್ರೇಗೌಡ, ಝಕಾರಿಯಾ ಜಾಕೀರ್, ಹೆಚ್.ಎಸ್. ಮಂಜಪ್ಪ, ರಾಜೇಂದ್ರ ಕಣಚೂರು, ರವಿ ಎಂ.ಕೆ., ಚಂದ್ರು ನಿಡುವಾಳ, ಜ್ಯೋತಿ ವಿರಲ್, ಸಂಪತ್ ಪಟ್ಟದೂರು, ಸುರೇಶ್ ಎಂ.ಎಸ್., ಹೆಚ್.ಎಂ. ಮಂಜುನಾಥ್, ಸತೀಶ್ ಮರ್ಕಲ್, ರೆಹಮಾನ್, ಪ್ರಸನ್ನ, ಕೆ.ಪಿ. ಭಾರತಿ, ರವಿ ಹೊಸ್ಮಾರೆ, ಲೋಹಿತ್, ಧರ್ಮೇಶ್, ಸಂದೇಶ್, ಪ್ರಹ್ಲಾದ್, ಪ್ರವೀಣ್, ರುದ್ರೇಗೌಡ, ಜಗನ್ನಾಥ್, ಸಂತೋಷ್ ಇನಾರಿ ಹಾಗೂ ಸತೀಶ್ ಕೋಟೆಬೇಳುರು ಸೇರಿದಂತೆ 200ಕ್ಕೂ ಹೆಚ್ಚು ಪ್ರಮುಖ ಕಾರ್ಯಕರ್ತರು ಈ ಸಂದರ್ಭದಲ್ಲಿ ಜೆಡಿಎಸ್ ಸೇರಿದರು.

**'ನಾಗೇಂದ್ರ ಕೂಡಲೇ ರಾಜೀನಾಮೆ ನೀಡಲಿ'**

ಸೇರ್ಪಡೆ ಕಾರ್ಯಕ್ರಮಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ಸಚಿವ ನಾಗೇಂದ್ರ ವಿರುದ್ಧದ ಆರೋಪಗಳು ಹೊಸದಲ್ಲ. ಕಳೆದ ವರ್ಷದಿಂದಲೇ ಈ ಬಗ್ಗೆ ಆರೋಪಗಳಿವೆ. ಹಿಂದಿನ ಸರ್ಕಾರದ ಅವಧಿಯಲ್ಲೇ 87 ಕೋಟಿ ಅಕ್ರಮ ವರ್ಗಾವಣೆಯಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಇಂತಹ ಗಂಭೀರ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದರು.

**'ರೈತರ ಪರಿಸ್ಥಿತಿ ಚಿಂತಾಜನಕ'**

ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗಗಳಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ರೈತರ ಸಂಕಷ್ಟ ಕಣ್ಣಿಗೆ ಬಿದ್ದಿದೆ ಎಂದು ನಿಖಿಲ್ ಹೇಳಿದರು. "ರೈತರು ಬೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ 3 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಸರ್ಕಾರಕ್ಕೆ ರೈತರ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲ" ಎಂದು ಆರೋಪಿಸಿದರು.

**'ಸದನದಲ್ಲಿ ಜನರ ಸಮಸ್ಯೆಗಳ ಚರ್ಚೆಯಾಗಲಿ'**

ವಿಧಾನಸಭೆ ಕಲಾಪದಲ್ಲಿ ನೈಸ್ ರಸ್ತೆ ಹಗರಣ, ಬಿಡದಿ ಸೇರಿದಂತೆ ಹಲವು ಪ್ರಮುಖ ವಿಚಾರಗಳ ಕುರಿತು ಚರ್ಚೆಯಾಗಬೇಕಿತ್ತು. ಆದರೆ ಸರ್ಕಾರ ರೈತರು ಮತ್ತು ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸದೆ ಕಾಲಹರಣ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಪಾರ್ಕ್‌ಗಳ ಬಳಕೆ ಬಿಲ್‌ಗೆ ವಿರೋಧ**

ಬೆಂಗಳೂರಿನ ಉದ್ಯಾನವನಗಳ ಶೇ.5ರಷ್ಟು ಜಾಗವನ್ನು ವಾಣಿಜ್ಯ ಅಥವಾ ಇತರ ಉದ್ದೇಶಗಳಿಗೆ ಬಳಸಲು ಅವಕಾಶ ನೀಡುವ ಪ್ರಸ್ತಾವನೆಗೆ ನಿಖಿಲ್ ವಿರೋಧ ವ್ಯಕ್ತಪಡಿಸಿದರು.

"ಪಾರ್ಕ್‌ಗಳು ಸಾರ್ವಜನಿಕರ ಆಸ್ತಿ. ಅವುಗಳನ್ನು ಉಳಿಸಿಕೊಳ್ಳಬೇಕು. ಶೇ.5ರಷ್ಟು ಜಾಗವನ್ನು ಬಳಕೆಗೆ ನೀಡಿದರೆ ಬೆಂಗಳೂರಿನಲ್ಲಿ ಜನರು ಉಸಿರಾಡಲು ಏನು ಉಳಿಯುತ್ತದೆ? ಸರ್ಕಾರ ಇಂತಹ ನಿರ್ಧಾರ ಕೈಗೊಳ್ಳುತ್ತಿರುವುದರ ಹಿಂದಿನ ಉದ್ದೇಶವೇನು ಎಂಬುದು ಅರ್ಥವಾಗುತ್ತಿಲ್ಲ" ಎಂದು ಅವರು ಟೀಕಿಸಿದರು.

# ತುಂಗಾ ನಾಲೆಯಲ್ಲಿ ಬಾಲಕ ನೀರುಪಾಲು

● ವಿಕ್ರಮ ವಾಹಿನಿ | ಶಿವಮೊಗ್ಗ

ತುಂಗಾ ಮೇಲ್ದಂಡೆ ನಾಲೆಯಲ್ಲಿ ಈಜಲು ತೆರಳಿದ್ದ 15 ವರ್ಷದ ಬಾಲಕ ನೀರುಪಾಲಾಗಿರುವ ಘಟನೆ ಶಿವಮೊಗ್ಗ ತಾಲೂಕಿನ ಅಬ್ಬಲಗೆರೆ ಬಳಿ ನಡೆದಿದೆ.

ಬೊಮ್ಮನಕಟ್ಟೆ ನಿವಾಸಿ ಕೃಷ್ಣ (15) ನೀರುಪಾಲಾದ ಬಾಲಕ. ನಗರದ ಶಾಲೆಯೊಂದರಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಕೃಷ್ಣ, ಆರು ಮಂದಿ ಸ್ನೇಹಿತರೊಂದಿಗೆ ತುಂಗಾ ಮೇಲ್ದಂಡೆ ನಾಲೆಗೆ ಈಜಲು ತೆರಳಿದ್ದ ಎನ್ನಲಾಗಿದೆ.

ನಾಲೆಯಲ್ಲಿ ನೀರಿನ ಹರಿವು ಹೆಚ್ಚಾಗಿದ್ದ ಸಂದರ್ಭದಲ್ಲಿ ಕೃಷ್ಣ ಈಜಲು ಮುಂದಾಗಿದ್ದು, ನೀರಿನ ಸೆಳೆತಕ್ಕೆ ಸಿಲುಕಿ ನಿಯಂತ್ರಣ ಕಳೆದುಕೊಂಡು ಕಣ್ಮರೆಯಾಗಿದ್ದಾನೆ ಎಂದು ತಿಳಿದುಬಂದಿದೆ. ಸ್ನೇಹಿತರು ಬಾಲಕನನ್ನು ರಕ್ಷಿಸಲು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ.

ಘಟನೆ ಮಾಹಿತಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಸ್ಥಳಕ್ಕೆ ಧಾವಿಸಿ ಬಾಲಕನಿಗಾಗಿ ಶೋಧ ಕಾರ್ಯ ಆರಂಭಿಸಿದ್ದಾರೆ. ನಾಲೆಯಲ್ಲಿ ನೀರಿನ ಹರಿವು ಹೆಚ್ಚಿರುವ ಹಿನ್ನೆಲೆಯಲ್ಲಿ ಶೋಧ ಕಾರ್ಯಕ್ಕೆ ಅಡಚಣೆ ಉಂಟಾಗಿದೆ.

ಘಟನೆ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಬಾಲಕನ ಪತ್ತೆಗಾಗಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481 vikramavahini@gmail.com 93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 148,